ಬಾನ ಹೃದಯದಲಿ

(ಕವನ ಸಂಕಲನ)

ಲೇಖಕರು

ಕನ್ನಡ ಸಾಂಸ್ಕೃತಿಕ ಸಂಘದ ಸದಸ್ಯರು

೨೦೦೬

ಪ್ರಕಾಶನ

ಕನ್ನಡ ಸಾಂಸ್ಕೃತಿಕ ಸಂಘ

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು

ಬೆಂಗಳೂರು ೫೬೦ ೦೧೭

ಬಾನ ಹೃದಯದಲಿ

(ಕವನ ಸಂಕಲನ)

ಲೇಖಕರು

ಕನ್ನಡ ಸಾಂಸ್ಕೃತಿಕ ಸಂಘದ ಸದಸ್ಯರು

೨೦೦೬

ಪ್ರಕಾಶನ

ಕನ್ನಡ ಸಾಂಸ್ಕೃತಿಕ ಸಂಘ

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು

ಬೆಂಗಳೂರು ೫೬೦ ೦೧೭

BANA HRIDAYADLI
- a collection of poems in Kannada written by the members of Kannada Samaskruthika Sangha, NAL, Bangalore 560 017.

Published by Sangha in June 2006

ಬಾನ ಹೃದಯದಲಿ
ಲೇಖಕರು - ಕನ್ನಡ ಸಾಂಸ್ಕೃತಿಕ ಸಂಘದ ಸದಸ್ಯರು
ಪ್ರಕಟಣೆ : ಜೂನ್ ೨೦೦೬
ಈ ಪ್ರಕಟಣೆಯ ಹಕ್ಕು ಕನ್ನಡ ಸಾಂಸ್ಕೃತಿಕ ಸಂಘಕ್ಕೆ ಸೇರಿದೆ

ಬೆಲೆ : ರೂ. ೧೦.೦೦

ಕನ್ನಡ ಸಾಂಸ್ಕೃತಿಕ ಸಂಘ
ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು
ಬೆಂಗಳೂರು ೫೬೦ ೦೧೭

ಕಾರ್ಯಕಾರಿ ಸಮಿತಿ: ೨೦೦೪ - ೨೦೦೬

ಪ್ರಧಾನ ಪೋಷಕರು	: ಡಾ॥ ಅ ರ ಉಪಾಧ್ಯ
ಅಧ್ಯಕ್ಷರು	: ಶ್ರೀ ಸಿ ಚಂದ್ರಶೇಖರ್
ಉಪಾಧ್ಯಕ್ಷರುಗಳು	
ಕಣಾದ	: ಡಾ॥ ರಾ ರಾಮಚಂದ್ರರಾವ್
ಜಾಹೀರಾತು	: ಶ್ರೀ ಪಿ ಜಿ ನೈಕುಂಟವಾಸನ್
ಸಾಂಸ್ಕೃತಿಕ	: ಶ್ರೀ ಜಿ. ರವೀಂದ್ರ
ಪುಸ್ತಕ ಭಂಡಾರ	: ಶ್ರೀ ಕೆ. ಎಲ್. ರಾಮಕೃಷ್ಣ ಮತ್ತು ಶ್ರೀ ಕೃಷ್ಣಪ್ಪ
ಕಣಾದ ಪ್ರಸಾರ	: ಶ್ರೀ ಎಸ್ ಆರ್ ಗಿರಿಗೌಡ
ಕಾರ್ಯದರ್ಶಿ	: ಶ್ರೀ ಎಮ್ ಆನಂದ್
ಮಹಿಳಾ ಪ್ರತಿನಿದಿ	: ಶ್ರೀಮತಿ ಆರ್ ಆರ್ ವೀಣಾ
ಖಜಾಂಚಿ	: ಶ್ರೀ ಸದಾಶಿವ

ಮುನ್ನುಡಿ - ನನ್ನುಡಿ

ಕಳೆದೊಂದು ದಶಕದಿ ಬಾನಂಗಳದಲ್ಲಿ ಕುಡಿಯೊಡೆದು ಬಂದು ನಿಂದು ಸಹೃದಯ ಓದುಗರನ್ನು ತನ್ನತ್ತ ಬರಸೆಳೆದು ಭರವಸೆಯ ಬೆಳಕನ್ನು ಪಸರಿಸಿ ಪ್ರಭೆಯಿಂದ ಪ್ರಜ್ವಲಿಸುತ್ತಿರುವ ಕೆಲ ಕವನಗಳು ಅನುಭವದ ಸಹಜತೆಯ ಪ್ರತಿಬಿಂಭ. ಮತ್ತೆ ಕೆಲವು ಕವನಗಳು ಕನ್ನಡ ಭಾಷೆಯ ಮೇಲೆ ತಮಗಿರುವ ಪ್ರೀತ್ಯಾದರಗಳ ಪ್ರತಿರೂಪ. ಸಾರಾಂಶ ಇಷ್ಟೆ. ಬರೆಯುವ ಗೀಳಿನ ಬರಹಗಾರರ ಸಂಖ್ಯೆ ಇಮ್ಮಡಿಯಾಗುತ್ತಿರುವ ಆಶಾದಾಯಕ ಬೆಳವಣಿಗೆ. ಸಂತಸ ನನಗೆ ಮುನ್ನುಡಿ ಬರೆಯಲು ಈ ಕವನ ಸಂಕಲನಕೆ.

ನಿರಂತರವಾಗಿ ಸಾಗಲಿ ಈ ಕವನ ಸಂಕಲನದ ಸೃಷ್ಟಿ ಕಾರ್ಯ. ಮುಂಬರುವ ವರುಷಗಳಲಿ ಮುಮ್ಮಡಿಯಾಗಲಿ ಹವ್ಯಾಸಿ ಕವಿಗಳ - ಬರಹಗಾರರ ಬಳಗ. ಅತ್ಯುತ್ತಮ ಕವನಗಳು ಲೇಖನಿಗೆ ಸವಿಯೂಟ. ಸಾಂಸ್ಕೃತಿಕ ಸಂಘದ ಸದಸ್ಯರ ಸಧಬಿರುಚಿಯ ಒಡನಾಟ. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ ಕನ್ನಡ ಸಾಂಸ್ಕೃತಿಕ ಸಂಘದ ಸದಸ್ಯರ ನೈಜ ಕನ್ನಡ ಪ್ರೇಮ ಅಜರಾಮರವಾಗಿ ಪ್ರೀತಿಯಿಂದ ಎಲ್ಲರನು ತನ್ನತ್ತ ಬರಸೆಳೆಯಲಿ.

ಕವನಗಳ ವಿಮರ್ಶಿಸಲು ನಾನೇನು ಕವಿಯಲ್ಲ. ನಿಮ್ಮೆಲ್ಲರಂತೆಯೆ ಅಚ್ಚ ಸ್ವಚ್ಛ ಕನ್ನಡಿಗ. ಅಂತೆಯೆ ನಿಮ್ಮೆಲ್ಲರ ಹೃದಯಾಂತರಾಳದಲ್ಲಿ ಹುದುಗಿರುವ ಕವಿಗೆ ನನ್ನ ವಿನಮ್ರ ವಂದನೆ. ನಿಮ್ಮೆಲ್ಲರ ಸಹೃದಯ ಪ್ರಯತ್ನಕ್ಕೆ ಅಭಿನಂದನೆ.

ಎಲ್ಲ ಭಾಷೆಗೆ ಕೊಡಬೇಕು ಸಮಾನ ಸ್ಥಾನ
ಮಾತೃ ಭಾಷೆಗೆ ಮಾತ್ರ ಪ್ರಪ್ರಥಮ ಸ್ಥಾನ

ಬಾನ ಹೃದಯದಲಿ ಬೆಳಗಲೀ ಕವನ ಸಂಕಲನ
ಕನ್ನಡ ಭಾಷೆಯ ಬೆಳಕನ್ನು ಸವಿಯಲಿ ಜಗದ ಜನ

ಸತ್ಯಪ್ರಸಾದ್
ಸಿ. ಟಿ.ಎಫ್. ಡಿ. ವಿಭಾಗ
ರಾ. ವೈ. ಪ್ರ.

ಅಧ್ಯಕ್ಷರ ನುಡಿ

ಕನ್ನಡ ಸಾಂಸ್ಕೃತಿಕ ಸಂಘವು ಕಳೆದ ಸುಮಾರು ೧೦ ವರುಷಗಳಿಂದ ಕವನ ಸಂಕಲನವನ್ನು ಪ್ರಕಟಿಸುತ್ತಿದ್ದು, ಈ ನಿಟ್ಟಿನಲ್ಲಿ ಈ ವರ್ಷ ೯ನೆಯ ಸಂಚಿಕೆಯನ್ನು ಬಾನ ಹೃದಯದಲಿ ಎಂಬ ಶೀರ್ಷಿಕೆಯೊಂದಿಗೆ ಓದುಗರಿಗೆ ಅರ್ಪಿಸಲು ಸಂತೋಷವೆನಿಸುತ್ತದೆ. ಕನ್ನಡ ಸಂಘವು ಪ್ರತಿ ವರ್ಷವೂ ಪ್ರಯೋಗಶಾಲೆಯ ನೌಕರರಿಗಾಗಿ ತಮ್ಮ ಕವನಗಳನ್ನು ವಾಚಿಸುವ ಸ್ಪರ್ಧೆಗಳನ್ನು ಏರ್ಪಡಿಸಿ ಅವುಗಳನ್ನು ಮುದ್ರಣ ರೂಪದಲ್ಲಿ ಹೊರತರುತ್ತಿದೆ. ಈ ಕವನ ಸಂಕಲನವು ೨೦೦೪ ಮತ್ತು ೨೦೦೫ ನೇ ವರ್ಷದಲ್ಲಿ ನಡೆದ ಕವಿಗೋಷ್ಠಿಯಲ್ಲಿ ವಾಚಿಸಲ್ಪಟ್ಟ ಸುಮಾರು ೪೬ ಕವನಗಳನ್ನು ಹೊಂದಿದ್ದು ಆಕರ್ಷಣೀಯವಾಗಿ ಮೂಡಿ ಬಂದಿದೆ.

ಕಳೆದ ೨ ವರ್ಷಗಳಲ್ಲಿ ನಮ್ಮ ಸಹೋದ್ಯೋಗಿಗಳೂ, ಉದಯೋನ್ಮುಖ ಕವಿಗಳೂ ಆದ ಸಂಘದ ಸದಸ್ಯರು ಕವಿಗೋಷ್ಟಿಯಲ್ಲಿ ಸ್ವರಚಿತ ಕವನ ಗಳನ್ನು ವಾಚಿಸಿ ತಮ್ಮ ಕವಿತ್ವವನ್ನು ಪ್ರಚುರ ಪಡಿಸಿದರು. ಈ ಕವನಗಳನ್ನು ಬರೆದಿರುವ ಎಲ್ಲಾ ಕವಿ ಮಿತ್ರರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ಕವನಗಳನ್ನು ಸಂಕಲನ ರೂಪದಲ್ಲಿ ಪ್ರಕಟಿಸುವಲ್ಲಿ ಸಹಕರಿಸಿದ ಎಲ್ಲಾ ಸದಸ್ಯರಿಗೆ ಹಾಗೂ ಪದಾದಿಕಾರಿಗಳಿಗೆ ನನ್ನ ಕೃತಜ್ಞತೆಗಳು.

ಕವಿಗೋಷ್ಠಿಯ ಮತ್ತು ಈ ಪ್ರಕಟನೆಯ ಯಶಸ್ಸಿಗೆ ಕಾರಣವಾಗಿರುವ ಎಲ್ಲ ಮಿತ್ರರಿಗೂ ನನ್ನ ಆತ್ಮೀಯ ವಂದನೆಗಳು.

ಸಿ ಚಂದ್ರಶೇಖರ್

ಪರಿವಿಡಿ

ಕವಿತೆ ಮತ್ತು ಕವಿಗೋಷ್ಠಿ

ಡಾ॥ ವಿಮಲಾ ದತ್ತ

ನವೆಂಬರ್ ಬಂದೊಡನೆ ಕವಿತೆ ಬರೆಯುವ ತುಡಿತ;
ನಾ ಮುಂದು ತಾ ಮುಂದು ಎಂದು ದಾಂಗುಡಿಯಿಡುವ
ತಲೆ ಕೊರೆವ ವಿಷಯಗಳ ಮಿಂಚಿದ ವಿಚಾರಗಳ
ಮನದ ಭಾವಕೆ ಬೆರೆಸಿ ಒಪ್ಪು ಓರಣಗೊಳಿಸಿ
ಪದಪುಂಜದಲಿ ಕಟ್ಟಿ ನವಿರಾಗಿ ಸಿಂಗರಿಸಿ
ತಂದಿಹೆವು ಓದಲಿಕೆ ನಮ್ಮ ಕವಿ ಗೋಷ್ಠಿಯಲಿ.

ಅಲ್ಲಲ್ಲಿ ತುಂಡರಿಸಿ ಹಿಂದುಮುಂದಕೆ ಮಾಡಿ
ಪದ್ಯರೂಪಕೆ ತಂದ ಗದ್ಯದಾ ಸಾಲುಗಳೋ?
ಭಾವಗೀತೆಯ ಹೋಲ್ವ ಲಯಲಾಸ್ಯಮಾಧುರ್ಯ
ಪ್ರಾಸಛಂದೋಬದ್ಧ ಮನಸೆಳೆವ ಕವಿತೆಯೋ?
ಕನಸುಕಲ್ಪನೆಸ್ಫೂರ್ತಿ ಕ್ಲಿಷ್ಟಪದಗಳ ಜಾಲ
ಅಂತರಂಗವ ಕಲಕಿ ಬದ್ಧಿಮತ್ತೆಯ ಕೆಣಕಿ
ಅರ್ಥವಾಗದೆ ಉಳಿವ ನವ್ಯಕಾವ್ಯದ ತುಣುಕೋ?
ಭಾವನೆಗೆ ಹುರುಳಿದೆಯೋ? ಅರ್ಥಕ್ಕೆ ತಿರುಳಿದೆಯೋ?
ಅನಿಸಿಕೆಯ ಪೋಣಿಸಿಹ ಶೈಲಿ ಚೆನ್ನಿದೆಯೋ?
ಕವಿಯ ಮನದಾಳದಾಲೋಚನೆಯ ಅಭಿವ್ಯಕ್ತಿ
ಚಂದದಲಿ ಮೂಡಿದೆಯೋ? ಭಾಷೆಯಲಿ ಸೊಗಡಿದೆಯೋ?
ಕೇಳುಗರು ನೀವೆಲ್ಲ ನಿರ್ಧರಿಸಬೇಕಿದನು.

ಕನ್ನಡದ ಕವಿಗಣತಿ ಯಾರೊ ನಡೆಸಿದರಂತೆ
ಕವಿಗಳಿದ್ದಾರಂತೆ ಎರಡು ಲಕ್ಷದ ಮಂದಿ
ಹಿರಿಯ ಕವಿ–ಕಿರಿಯ ಕವಿ, ಸರಸ ಕವಿ–ವಿರಸ ಕವಿ,
ಖ್ಯಾತ ಕವಿ–ಹಾಸ್ಯ ಕವಿ, ಕ್ರಾಂತಿ ಕವಿ–ನವ್ಯ ಕವಿ,
ವೃತ್ತಿನಿರತ ಹವ್ಯಾಸಿ ಕವಿ, ಅರಳುತಿಹ ಮರಿ ಕವಿ,
ಹಸಿದ ಬಂಡಾಯ ಕವಿ, ಹನಿಗವನ ಬರೆವ ಕವಿ,
ಯಾವ ಲೆಕ್ಕಕು ಸಿಗದ ನನ್ನಂಥ ನಿಮ್ಮಂಥ
ಹೆಸರು ಮಾಡದ ಕವಿಯ ಎಣಿಕೆ ಮಾಡಿಲ್ಲ ಬಿಡಿ.

ದೀವಳಿಗೆ ಸಮಯದಲಿ ನವೆಂಬರ್ ಮಾಸದಲಿ
ಕಿಂದರಿಜೋಗಿ ಕಥೆಯ ಇಲಿಯ ಹಿಂಡಿನ ತೆರದಿ

ಹಲಬಗೆಯ ಕವನಗಳ ದಿಬ್ಬಣವೆ ಹೊರಡುವುದು;
ತಾಯ್ನುಡಿಗೆ ಅರ್ಪಿಸುವ ನಮ್ಮಳಿಲ ಸೇವೆಯನು
ನಮಿಸುತ್ತ ಒಂದಾಗಿ ಕವನಸುಮ ಮಾಲೆಯನು
ತುಂಬಿ ತಳುಕುತ್ತಿರಲಿ ಕಾವ್ಯಲೋಕದ ಮಡಿಲು
ಕರುನಾಡ ಶ್ರೀಮಂತ ಸಾಹಿತ್ಯದಾ ಸೆಲೆಯು

ಹೀಗೊಂದು ಸಂವಾದ

ಡಾ॥ ವಿಮಲಾ ದತ್ತ

ಮೊಗವೇಕೆ ಬಾಡಿಹುದು
ಕಣ್ಣು ಕಳೆಗುಂದಿಹುದು
ಯಾವ ಚಿಂತೆಯು ನಿನ್ನ
ಕಾಡಿಹುದು ಮಗಳೇ?

ಹೇಗೆ ಹೇಳಲಿ ಅಮ್ಮಾ?
ನಿನ್ನದೇ ನಿನಗುಂಟು
ನೂರೆಂಟು ಬವಣೆಗಳು
ಗೊಂದಲ ಗೋಜಲುಗಳು

ಮನದಳಲ ತಿಳಿಸಿದೆಡೆ
ಹೃದಯ ಹಗುರಾಗುವುದು
ಮಗಳ ದುಗುಡದ ಕಥೆಗೆ
ಕಿವಿಗೊಡದೆ ಇರಲುಂಟೆ?

ತಾಯ್ನುಡಿಯ ಮರೆತಿಹರು
ಪರಭಾಷೆ ಮೋಹದಲಿ
ಅಭಿಮಾನ ಶೂನ್ಯತನ
ನಾನೆಂತು ಬಣ್ಣಿಸಲಿ?

ಪ್ರಕೃತಿದೇವಿಯೆ ಕೇಳೌ
ನೀನಿತ್ತ ಬಳುವಳಿಯ
ಮಲೆನಾಡ ವನಸಿರಿಯ
ಮನಸಾರೆ ದೋಚಿಹರು

ನಾಡ ಮರಮಟ್ಟುಗಳ
ಬೆಟ್ಟ ಬಂಡೆ ಕಲ್ಲುಗಳ
ಕೋಟಿ ಹಣದಾಶೆಯಲಿ
ಹಾಳು ಮಾಡುತಲಿಹರು.

ಗಂಧದಾ ಗುಡಿಯಿಂದ
ಚಂದನದ ಕೊರಡುಗಳ
ದೇವ ಮಂದಿರದಿಂದ
ಕೆತ್ತನೆಯ ಶಿಲ್ಪಗಳ

ಕಂಚು ಹಿತ್ತಾಳೆ ದಂತ
ಸುಂದರ ಪ್ರತಿಮೆಗಳ
ಕಳ್ಳಸಾಗಣೆ ಮಾಡಿ
ಬೆಲೆಗೆ ಮಾರಿಹರು.

ನೀನೊಲಿದು ಹರಿಯಿಸಿದ
ಕೃಷ್ಣೆ ಕಾವೇರಿಯರ
ಕಪಿಲೆ ಹೇಮಾವತಿಯ
ಕಾಳಿ ತುಂಗೆ ಭದ್ರೆಯರ

ನೀರೆಲ್ಲ ನಮದೆಂದು
ಯಾರಿಗೂ ಕೊಡೆವೆಂದು
ನೆರೆಹೊರೆಯ ನಾಡಿಗರ
ಒಡನೆ ಗುದ್ದಾಡಿಹರು.

ಜೋಗ ಜಲಪಾತದಲಿ
ಶರಾವತಿಯ ನೀರಿಲ್ಲ
ನೇತ್ರಾವತಿ ನದಿಯ
ತಿರುಗಿಸುವರಂತಲ್ಲ.

ನನ್ನ ಮಕ್ಕಳ ಸ್ವಾರ್ಥ
ಪರಿಸರವ ಕೆಡಿಸಿಹುದು
ಸಸ್ಯ ಪಶುಪಕ್ಷಿಗಳ
ನಾಶವಾಗುತಲಿಹದು.

ಅಹುದಹುದು ದಿಟವಹುದು
ಕನ್ನಡಾಂಬೆಯೆ ನಿನ್ನ
ವರಪುತ್ರರಿಗೆ ಬುದ್ಧಿ
ಬರುವ ಪರಿ ನಾನರಿಯೆ.

ಲಂಚಕೋರತನದಲ್ಲಿ
ಮೊದಲಿಗರು ನಾವೆಂಬ
ಹುಂಬರಿಗೆ ಮುಂದೇನು
ಕಾದಿದೆಯೊ ನಾ ಕಾಣೆ.

ನೊಂದು ನೀ ಕೊರಗದಿರು
ಕಣ್ಣೀರ ಒರೆಸುವರು
ಸದ್ದಿರದೆ ದುಡಿಯುತಿಹ
ನಿಸ್ವಾರ್ಥ ಸೇವಕರು

ಕತ್ತಲಿನ ಹಾದಿಯಲಿ
ದಾರಿದೀವಿಗೆ ಬೆಳಗಿ
ನಾಡು ನುಡಿ ಸಂಸ್ಕೃತಿಯ
ಉಳಿಸುವರು ಬೆಳೆಸುವರು.

ನಮ್ಮ ಪ್ರೀತಿಯ ಗೋಪಾಲ

ಸಿ ಆರ್ ಶ್ರೀನಿವಾಸ

ನಿರ್ದೇಶಕರಿರಲಿ, ವಿಜ್ಞಾನಿಯಿರಲಿ,
ಆಡಳಿತಾಧಿಕಾರಿಯಿರಲಿ,
ಗ್ರೂಪ್ ೧ ರಿಂದ ೪ ರವರೆಗೆ
ಯಾರೇ ನಿವೃತ್ತಿಯಾಗಲಿ
ಆ ಬೀಳ್ಕೊಡುಗೆಯ ಸಮಾರಂಭಕ್ಕೆ
ಇಬ್ಬರಿಗೆ ಆಹ್ವಾನ ಖಾಯಂ

ಒಬ್ಬ ಸುಭಾನ,
ಇನ್ನೊಬ್ಬ ನಮ್ಮ ಪ್ರೀತಿಯ ಗೋಪಾಲ

ಸುಭಾನನದು ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು ಮಿಶ್ರಿತ
ದೀರ್ಘ ಭಾಷಣ,
ನಮ್ಮ ಗೋಪಾಲನ ಶೈಲಿಯೇ ಬೇರೆ
ಅಚ್ಚ ಕನ್ನಡದ ಅರ್ಥಗರ್ಬಿತ
ಅಚ್ಚುಕಟ್ಟಾದ ಕನ್ನಡ ಕಾವ್ಯ ಲಹರಿ
ಕೇಳುಗರಿಂದ, ಕಿವಿಗಡಚಿಕ್ಕುವ, ಕರತಾಡನ ಪ್ರಶಂಸೆ.

ಕ್ಷಮೆಯಿರಲಿ ನಿಮ್ಮಿಂದ,
ಕ್ಷಮೆಯಿರಲಿ ಮತ್ತೊಮ್ಮೆ
ನಾವು ವರ್ಷದಲಿ ಒಮ್ಮೊಮ್ಮೆ ಮಾತ್ರ busy!
ನಮ್ಮ ಗೋಪಾಲ ವರ್ಷಪೂರ್ತಿ busy!
ತೆರಿಗೆದಾರ, ತೆರಿಗೆ ಕಟ್ಟಲು,
ತೆರಿಗೆ ಮಾಹಿತಿ ನೀಡುವ
ಜೂನ್, ನವೆಂಬರ್ ತಿಂಗಳಲಿ
ಈತ ಅತ್ಯಂತ busy!

ನಮ್ಮ ಗೋಪಾಲ ತ್ರಿಲೋಕಸಂಚಾರಿ!
ಮನದಲ್ಲಿ ಮೂಡದಿರಲಿ
ನಾರದನೆಂಬ ಶಂಕೆ

ಒಮ್ಮೆ ಐಎಮ್‌ಡಿ ಯಲ್ಲಿ, ಮತ್ತೊಮ್ಮೆ ಸೊಸೈಟಿಯಲಿ,
ಮಗದೋಮ್ಮೆ ಇನ್ಕಂ ಟ್ಯಾಕ್ಸ್ ಆಫೀಸ್ ನಲ್ಲಿ
ಕಾರ್ಯ ಗೌರವದ ಮೇಲೆ
ಈತ ತ್ರಿಲೋಕ ಸಂಚಾರಿ.

ಹಳಬರಿಗೆ, ಹೊಸಬರಿಗೆ, ಹಿರಿಯರಿಗೆ, ಕಿರಿಯರಿಗೆ
ಕಾಲ ದೇಶದ ನುಡಿಯ ಜಾತಿಯ ವಿಭೇಧಮಂ
ಲೆಕ್ಕಿಸದೆ ಸಂಸ್ಥೆಯ ಸರ್ವರನು
ಆದರಿಸಿ, ಆದರಿಸುವ ಸದಾ ಹಸನ್ಮುಖದ
ಸದಭಿರುಚಿಯ, ಸದ್ಗುಣ ಸಂಪನ್ನ
ನಮ್ಮ ಪ್ರೀತಿಯ ಗೋಪಾಲ.

ಕುವೆಂಪು ವಿರಚಿತ
ರಾಮಾಯಣ ದರ್ಶನಂದಲ್ಲಿ
ರಾಮ ಸೀತೆಗೆ ಹೇಳುವ ಮಾತು,
ತಿಮಿರಕ್ಕೆ ರವಿ ದಸ್ಸು,
ಜ್ಞಾನನುಜ್ಞಾನಕ್ಕೆ ದಸ್ಸು, ಮಾಯೆಯನಳಿಸಿ
ಮನುಜ ಹೃದಯವನಾಕ್ರಮಿಸುತಾತ್ಮಮಂ ತನ್ನ
ಕೃಪಗುಯ್ವ ಪರಮಾತ್ಮನುಂ ದಸ್ಸು,
ನಮ್ಮ ಗೋಪಾಲ ದಸ್ಸು ರಹಿತ
ಅರ್ಥಾತ್ ಅಜಾತ ಶತ್ರು.

ಶತಮಾನದ ಮಹಾಮಾರಿ ಸುನಾಮಿ...........

ಎಸ್.ಗೋಪಾಲ

ಸುನಾಮಿ ಎಂತಹ ಸುಂದರ ಹೆಸರು ।
ಆದರೆ ಆ ಸುಂದರ ಹೆಸರಿನ ಹಿಂದೆ ಅದೆಂತಹ ದುರಂತ ॥
ಜಗವೆ ತಲ್ಲಣಿಸಿದ ಆ ದಿನ ।
ಭೀಕರತೆಯ ಮುಖವಾಡ ಕಳಚಿದ ಈ ಸುನಾಮಿ ॥

ತಂದೊಡ್ಡಿದ ವಿಕೃತ ಕೋಪಕ್ಕೆ ಎಲ್ಲಿಲ್ಲದ ಅಡೆ ತಡೆ ।
ಉಕ್ಕೇರಿದ ಕಡಲು ಮುಗಿಲು ಮುಟ್ಟಿದ ತೆರೆ ॥
ನಿಮಿಷಾರ್ದದಲ್ಲಿ ಸಹಸ್ರ ಸಹಸ್ರ ಜೀವಿಗಳ ಮಾರಣ ಹೋಮ ।
ಕಾರಣ ಹುಡುಕುವ ವಿಜ್ಞಾನಿಗಳ ತಂಡ ॥

ಇತಿಹಾಸದ ಪುಟಗಳ ತಡಹುವಿಕೆ ।
ಇರಬೇಕು ಇದು ನಡಗುವ ನೆಲದ ಸಂಚು ॥
ಇಲ್ಲ ಬಿಸಿಯೇರಿದ ವಾತವರಣವೇ? ಒಂದೂ ತಿಳಿಯದು ।
ಆದರೆ ಇದು ಮಾತ್ರ ಪ್ರಕೃತಿಯ ನಿಗೂಡ ಮೂಲೆಯಲ್ಲಿ ಕಾದು ನಿಂತ ಟೈಂಬಾಂಬ್ ॥

ಯಾವ ಪೋಲೀಸರ ಕೈಗೂ ಸಿಗದ ಇದರ ಜಾಣತನ ।
ಪ್ರಾಣಹಾನಿಯ ಜೊತೆಗೆ ಅಪಾರ ಆಸ್ತಿ ಪಾಸ್ತಿಯ ಹಾಳು ॥
ಎಲ್ಲಾ ದೇಶಗಳ ಆಯವ್ಯಯ ಬುಡಮೇಲು ।
ಪ್ರಪಂಚದ ಅತಿ ಶ್ರೀಮಂತ ದೇಶವು ॥

ಬೇರೆಯವರ ಮುಂದೆ ಕೈ ಒಡ್ಡುವ ಪರಿಸ್ಥಿತಿ ।
ಆದರೆ ನಮ್ಮ ದಾರ್ಶನಿಕರ ಅಂಬೋಣ ॥
ರಕ್ತಪಾತ, ಕೊಲೆ, ಸುಲಿಗೆ, ಭ್ರೂಣಹತ್ಯೇ ಗೈಯುವ ಈ ಜಗಕೆ ।
ಬೇಕಲ್ಲವೇ ಒಂದು ಅಂಕುಶ ಅದೇ ಈ ಸುನಾಮಿ ॥

ಆದರೆ ದೇವಸ್ಥಾನ, ಚರ್ಚು, "ವಿಷ್ಣು ಸಹಸ್ರನಾಮ." ಜಪಿಸುವ ।
ಕೆಲವು ಸ್ಥಳಗಳು ಇದರಿಂದ ಹೊರತು ॥
ಅಂದಾಗ ನಮಗೆ ಹೊಳೆಯದೆ ಗೀತೆಯ ಕೃಷ್ಣನ ಆ ಚಂದದ ಮಾತುಗಳು ।
"ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ॥

ಕುಂತಿ...

ಎಸ್. ಗೋಪಾಲ

ಗೆಳೆಯಾ ।
ಕೇಳಿರುವೆಯಾ ಮಹಾಭಾರತದ ಈ ಕಥೆಯಾ ॥
ಇದ್ದಳಂತೆ ಒರ್ವ ಯುವತಿ ಹೆಸರು ಕುಂತಿ ।
ಮಾಡಿದಳಂತೆ ಬಹಳಷ್ಟು ಸೇವೆ ಮುನಿ ದೂರ್ವಾಸರಿಗೆ ॥

ಕರುಣಿಸಿದ ಮಹಾನುಭಾವ ಸಂತಾನಭಾಗ್ಯದ ಐದು ವರಗಳ ।
ಇರಲಿಲ್ಲ ನಂಬಿಕೆ ಒಡ್ಡಿದಳು ಮೊದಲ ವರವ ಪಣಕ್ಕೆ ॥
ಉದಯಿಸಿದ ಕರ್ಣ ಹೆದರಿದ ಕುಂತಿ ಸಮಾಜಕ್ಕೆ ।
ತೇಲಿ ಬಿಟ್ಟಳು ಗಂಗೆಯಲಿ ಮುಂದೆ ಅವನೆ ಮಹಾವೀರ ಕರ್ಣ ॥

ಆದರೆ ಗಳೆಯ ಕೇಳಿಲ್ಲಿ ।
ಇದು ಕಲಿಯುಗ ಇಲ್ಲಿ ಕುಂತಿಯರೆ ತುಂಬಿಹರು ಜಗಪೂರಾ ॥
ಇಲ್ಲಿ ಇವರಿಗೆ ದೂರ್ವಾಸರು ಬೇಕಿಲ್ಲ ।
ಸಾಕು ಇವರಿಗೆ ನಿನ್ನಂತಹ ಪೋರರ ಪ್ರೇಮ ಸಲ್ಲಾಪಗಳು ॥

ಆದರೆ ಎಲ್ಲಿ ತರುವರು ಜಗದ ತುಂಬೆಲ್ಲಾ ಗಂಗಾನದಿಯ ।
ಕಸದ ತೊಟ್ಟಿಗಳು, ಗಟಾರ, ತಿಪ್ಪೇ ಗುಂಡಿಗಳೇ ಆಗಿಹವು ಗಂಗಾನದಿ ॥
ಕಣ್ಣು ಬಿಡುವ ಮುನ್ನವೆ ಇಹಲೋಕ ತ್ಯಜಿಸುವ ಆ ಕರ್ಣರೆಷ್ಟೋ? ।
ಎಲ್ಲಿಹದು ಲೆಕ್ಕ? ಏಕೆ ಬೇಕು ಲೆಕ್ಕ? ಏಕೆಂದರೆ ॥

ಯಾರಿಗೂ ಇಡಲಿಲ್ಲವಲ್ಲ ನಾವು ಕರ್ಣನ ಹೆಸರ ।
ಆದರೆ ಗೆಳೆಯ, ಮತ್ತೊಮ್ಮೆ ಕಿವಿಗೊಟ್ಟು ಕೇಳು ॥
ನಾನೇನು ಇವರಿಗಿಂತ ಹೊರತಲ್ಲ ।
ನಿನ್ನ ಪಿಸುಮಾತು ಭರವಸೆಯ ಮಹಾಪೂರದಲ್ಲಿ ಕೊಚ್ಚಿ ಹೋಗಿರುವೆ ॥

ಆದರೆ ನನ್ನದೊಂದೇ ವಿನಂತಿ ನಿನಗೆ ।
ದ್ವಾಪರವೊ, ಕಲಿಯುಗವೊ, ಯಾವುದೇ ಇರಲಿ ॥
ನಿನ್ನ ಬಿಟ್ಟರದು ಈ ನನ್ನ ಮನವು ಮತ್ತೇ ।
ಗೆಲೆಯ ನನ್ನ ಸೇರಿಸದಿರು ಮತ್ತೋರ್ವ ಕುಂತಿಯ ಲೆಕ್ಕಕ್ಕೆ ॥

ಕೊರಗಿದೆನು ಮರುಗಿದೆನು

ಸಿ. ಅಪ್ಪಾಜಿ

ಕೊರಗಿದೆನು ಮರುಗಿದೆನು
ನಿನ್ನಯ ನೆನಪಲಿ ಬೆಂಡಾದೆನು
ಗೆಳತಿ ನಾ ಬೆಂದೆನು ॥ಕೊ॥

ಅನು ದಿನ ನಿನ್ನಾ ಹೃದಯ
ಹೂವಾಗಿತ್ತು ನನ್ನ ಹೃದಯ
ಗಿಡವಾಗಿತ್ತು ಈ ದಿನ ಏಕೊ ಕಾಣೆ
ನಿನ್ನಾ ಹೃದಯ ಕಲ್ಲಾಯಿತು
ನನ್ನ ಹೃದಯ ಮಣ್ಣಾಯಿತು ॥ಕೊ॥

ದೇವರಂತ ತಂದೆ ತಾಯ ನಾ ಮರೆತೆನು
ಪ್ರೀತಿ ತಂದ ಬಂಧು ಬಳಗ ನಾ ತೊರೆದೆನು
ನಿನ್ನಯ ಸ್ನೇಹ ಮಾಡಿ ಹುಚ್ಚನಾದೆನು
ಗೆಳತಿ ಹುಚ್ಚನಾದೆನು ॥ಕೊ॥

ಹೊಸ ಜೋಡಿಗೆ ಶುಭವಾಗಲಿ

ಸಿ. ಅಪ್ಪಾಜಿ

ಸಂಸಾರವೆಂಬ ಸಾಗರದಲ್ಲಿ
ಬಾಳೆಂಬ ದೋಣಿಯಾ
ನಡೆಸಲು ಹೊರಟಿರುವ
ಹೊಸ ಜೋಡಿಗೆ ಶುಭವಾಗಲಿ
ನವಜೋಡಿಗೆ ಜಯವಾಗಲಿ ॥ಸಂ॥

ಯಾರ ಭಯವು ನಿಮಗೆ ಇಲ್ಲಾ
ಯಾರ ತಡೆಯು ಖಂಡಿತ ಇಲ್ಲಾ
ತಂದೆ–ತಾಯಿ ಬಂಧನದಿಂದ
ಬಿಡುಗಡೆ ಆಗಿದೆಯಲ್ಲ

ನಿಮ್ಮದೇ ಜೀವನವೆಲ್ಲ ॥ಸಂ॥
ಗೂಡು ಬಿಟ್ಟ ಹಕ್ಕಿಯಂತೆ
ದುರ ನೀವು ಸರಿಯದಿರಿ
ಒಬ್ಬರನ್ನೊಬ್ಬರು ಅರಿತು
ಸುಖವಾಗಿ ನೀವು ನೂರು ವರುಷ ಬಾಳಿರಿ
ನೂರಾರು ವರುಷ ಬಾಳಿರಿ ॥ಸಂ॥

ಗಂಡ – ಹೆಂಡತಿ

ಸಿ. ಅಪ್ಪಾಜಿ

ಗಂಡ: ಚಂದಿರನಂತೆ ನಿನ್ನಾ ಮೊಗವು
ತಾವರೆಯಂತೆ ನಿನ್ನಾ ಮೊಗವು
ನೀ ನಿರಲು ಗೆಳತಿ ನಮ್ಮೀಮನೆಗೆ
ಆನಂದವೆ ತುಂಬಿದಂತೆ
ಆ... ಸ್ವರ್ಗವೆ ಜಾರಿದಂತೆ

ಹೆಂಡತಿ: ಬಂಗಾರದಂತ ನಿನ್ನಾ ಮೊಗವು
ಸಿಂಗಾರದಂತ ನಿನ್ನಾ ನಗುವು
ನೀ ನಿರಲು ಗೆಳೆಯಾ ನಮ್ಮ ಮನೆಗೆ
ಆನಂದವೆ ತುಂಬಿದಂತೆ
ಆ... ಸ್ವರ್ಗವೆ ಜಾರಿದಂತೆ

ಗಂಡ: ನಿನ್ನಾ ನೋಡಿದ ಮೇಲೆ ಚಿನ್ನಾ
ಏನೇನೊ ಕೇಳೋ ಆಸೆ ರನ್ನಾ
ಬಳಿಯಲಿ ನೀನು ಇರುವಾಗ ಗೆಳತಿ
ನಿನ್ನನ್ನೇ ನಾನು ಮರೆತೆನು ಒಡತಿ

ಹೆಂಡತಿ: ಹಾಲು ಜೇನು ಸೇರಿದ ಹಾಗೆ ನನ್ನ ನಿನ್ನಾ
ಸಂಬಂಧ । ಏಳೇಳು ಜನ್ಮ ಬಂದರೂ ಹೀಗೆ
ಇರೊ ಆಸೆ ನನ್ನಲ್ಲಿ । ಈ ನಿನ್ನ ಜೊತೆ
ಇದ್ದರೆ ಸಾಕು ಇನಿಯಾ ಇನ್ನೇನು ಬೇಕಿಲ್ಲ ನನ್ನ ಒಡೆಯ ॥

ಕನ್ನಡ ರಾಜ್ಯೋತ್ಸವ

ಸಿ. ಅಪ್ಪಾಜಿ

ಬಂದಿದೆ ಬಂದಿದೆ ರಾಜ್ಯೋತ್ಸವವು ।
ಐವತ್ತು ವರ್ಷದ ಸುವರ್ಣದಬ್ಬವು ॥
ಹಾರಿದೇ ಹಾಡಿದೇ ಕನ್ನಡ ಧ್ವಜವು ।
ಪಂಚ ಕೋಟಿ ಕನ್ನಡಿಗರ ಪಣ್ಯ ಧ್ವಜವು ॥

ಮಹಾನ್ ಮಹಾನ್ ಕವಿಗಳು ।
ಲೇಖನಿಯ ಹಿಡಿದರು ಕನ್ನಡಾಂಬೆಯ ಸೇವೆಗಾಗಿ ॥
ಧೀರರು ಶೂರರು ಹೋರಾಟ ಮಾಡಿದರು ।
ತಾಯಿ ಭುವನೇಶ್ವರಿಯ ಉಳಿವಿಗಾಗಿ ॥

ಯಾವುದು ಹೇಳು ಪ್ರೀತಿ ?

ಆರ್. ಸಿ. ರಾಜೇಂದ್ರ

ಹೃದಯಕ್ಕೆ ಹೃದಯ ಮಿಡಿಯುವುದಾ ಪ್ರೀತಿ
ನಯನಕ್ಕೆ ನಯನ ಸೇರುವುದಾ ಪ್ರೀತಿ
ವದನಕ್ಕೆ ವದನ ಬೆಸೆಯುವುದಾ ಪ್ರೀತಿ
ಅಧರಕ್ಕೆ ಅಧರವನ್ನಿಟ್ಟು ಚುಂಬಿಸುವುದಾ ಪ್ರೀತಿ
ನೀ ಹೇಳು ಪ್ರೇಯಸಿ ಯಾವುದು ಪ್ರೀತಿ ?

ತೋಳಿಗೆ ತೋಳು ಸೇರಿಸಿ ಆಲಂಗಿಸುವುದಾ ಪ್ರೀತಿ
ತೊಡೆ ಮೇಲೆ ತಲೆ ಇಟ್ಟು ಹರಟುವುದಾ ಪ್ರೀತಿ
ಪ್ರತಿ ದಿನಾ ಸಿನಿಮಾ ಉದ್ಯಾನವನವನ್ನು ಸುತ್ತುವುದಾ ಪ್ರೀತಿ
ದಿನವಿಡೀ ಪೋನಿನಲಿ ಹರಟೆ ಹೊಡೆಯುವುದಾ ಪ್ರೀತಿ
ನೀ ಹೇಳು ಪ್ರೇಯಸಿ ಇನ್ಯಾವುದು ಪ್ರೀತಿ ?

ಪರಿ ಪರಿ ಓಲೆ ಉಡುಗೊರೆ ಕಳಿಸುವುದಾ ಪ್ರೀತಿ
ಬಿಸಿಲಲ್ಲಿ ಐಸ್‌ಕ್ರೀಮ್ ತಿನಿಸುವುದಾ ಪ್ರೀತಿ
ವಿಧ ವಿಧ ತಿನಿಸುಗಳನ್ನು ಕೊಡಿಸುವುದಾ ಪ್ರೀತಿ
ಚಿಕ್ಕ ಚಿಕ್ಕ ವಿಷಯಕ್ಕೆ ಮುನಿಸು ಮಾಡಿಕೊಳ್ಳುವುದಾ ಪ್ರೀತಿ

ನಾನರಿಯೆ ಪ್ರೇಯಸಿ ನಿನ್ನಯಾ ಪ್ರೀತಿ ?
ದುಂಬಿಯನ್ನು ಹೂವು ಸೆಳೆಯುವುದಾ ಪ್ರೀತಿ
ಮಗುವನ್ನು ತಾಯಿ ಪೋಷಿಸುವುದಾ ಪ್ರೀತಿ
ಕರುವಿಗೆ ಹಸು ಹಾಲುಣಿಸುವುದಾ ಪ್ರೀತಿ
ಹಕ್ಕಿ ತನ್ನ ಮರಿಗೆ ಗುಟುಕಿಡುವುದಾ ಪ್ರೀತಿ
ಮನಸ್ಸನ್ನು ಮನಸ್ಸು ಅರಿತುಕೊಳ್ಳುವುದಾ ಪ್ರೀತಿ
ನೀ ಹೇಳು ಪ್ರೇಯಸಿ ನಿನ್ನದಾವುದು ಪ್ರೀತಿ ?

ಕನ್ನಡಿಗ

ಆರ್. ಸಿ. ರಾಜೇಂದ್ರ

ತನವು ಕನ್ನಡ ಮನವು ಕನ್ನಡ
ನನ್ನ ಮಾತೃಭಾಷೆ ಕನ್ನಡ
ನಾನು ಕನ್ನಡಿಗನೆಂಬ ಮಾತನು
ಮನವ ತುಂಬಿ ಹೇಳುವೆ ॥ಪಲ್ಲವಿ॥

ನೀವು ಕನ್ನಡಿಗರು ನಾನು ಕನ್ನಡಿಗ
ನಾವು ಜೀವಿಸುವ ನೆಲವು ಕರುನಾಡು
ನಾವು ಕುಡಿವ ನೀರು ಕಾವೇರಿ
ನಮ್ಮ ಆಡು ಭಾಷೆ ಕನ್ನಡ ॥ತನುವು॥

ಎನ್ನ ಪೂಜೆ ಕನ್ನಡಾಂಬೆಗೆ
ಎನ್ನ ಕಾಯಕ ಕನ್ನಡಿಗರಿಗೆ
ನಾವೆಲ್ಲರು ಒಂದಾಗಿ ಕನ್ನಡ ನೆಲ ಉಳಿಸುವ
ಕನ್ನಡಿಗರ ಬಳೆಸುವ ಕನ್ನಡಿಗರೆಲ್ಲಾ ಒಂದಾಗಿ
ಕನ್ನಡ ಭಾಷೆ ಕಲಿಸುವ ಕನ್ನಡಕ್ಕಾಗಿ ಮಡಿಯುವ ॥ತನವು॥

ನೆನಪು

ಎಸ್. ಆರ್. ಗಿರಿಗೌಡ

ಹೊಸದಾಗಿ ಶುರುವಾಯಿತು ನಮ್ಮೊಳಗೊಳಗೆ ಗೆಳೆತನ
ನೆನ್ನೆಗಳ ನೆನೆದು ಹಾಡುವುದೇ ನೆನಪಿನಾ ದಿನ
ಆ ನೋವ ಬಚ್ಚಿಟ್ಟು ಎದೆಯೊಳಗೆ ನಿನ್ನ ನೆನಪ
ಲಾಭವೇನಿದೆ ಓ ಪ್ರಿಯೆ ಈ ಹೃದಯ ಮಾತನು ಕೇಳಬಾರದೆ ಒಮ್ಮೆ

ಸ್ವಾತಿ ಮಳೆ ಧರೆಗಿಳಿದಾಗ ಹನಿ ಹನಿಯಾಗಿ
ಮರೆಯಲಾಗದು ಈ ಹೃದಯ ನನ್ನ ನಿನ್ನ ಹಿಂದಿನ ಸವಿನೆನಪ
ಈ ಹೃದಯವನು ಛಿದ್ರಿಸಬೇಡ ನಿನ್ನಂತರಾತ್ಮವ ಕಲಕಿ
ನಿನ್ನ ಜೀವಕ್ಕೆ ಜೀವವಾಗಿರುವ ನನ್ನ ಹೃದಯದ ಮಾತನ್ನು
ಕೇಳಬಾರದೇ ಒಮ್ಮೆ ಪ್ರಿಯತಮೆ ಕನಿಕರಿಸಿ ನಿನ್ನ ಪ್ರಿಯಕರನನ್ನು

ಚೈತ್ರದಿ ಚಿಗುರಿದಾ ಎಲೆ ಮೇಲೆ ಮುತ್ತಿನಾ ಮಣಿಯಂತೆ ಹೊಳೆಯುವ
ಇಬ್ಬನಿ ಹನಿ
ಚಿಗುರಿದಾ ಎಲೆ ಮೇಲೆ ನಿನ್ನ ಲಜ್ಜೆಯ ರಸದೌತಣ ಈ ಮನಸ್ಸಿಗೆ
ಬೀಸಿದಾ ಕುಳಿರ್ ಗಾಳಿ ನನ್ನೆದೆ ಬಡಿತಕೆ ತಂಪೆರೆಯಲು ನಿನ್ನ ನೆನಪಿನ
ಮನಸು
ಆಲೈಸಿ ಕೇಳಬಾರದೊಮ್ಮೆ ನಿನ್ನ ಪ್ರಿಯತಮನ ನೆನಪಿನಂಗಳದ
ನೆನಪನು
ಕುಳಿತಿಹೆನು ಗಿಳಿಯಂತೆ ಒಣ ಮರದ ಮೇಲೆ ನಿನ್ನ ನೆನಪಲಿ
ತೆರೆಯಬಾರದೆ ಒಮ್ಮೆ ನಿನ್ನ ನೆನಪಿನಂಗಳದ ಬಾಗಿಲನು

ಮೌನಗೀತೆ

ಎಸ್. ಆರ್. ಗಿರಿಗೌಡ

ಆರತಕ್ಷತೆ ಮದುಮಕ್ಕಳಿರ್ವರಿಗೆ ಮದುವೆ ಮನೆಯಲ್ಲಿ
ನವಿಲುಗಳೆರಡು ಗರಿಗೆದರಿ ನರ್ತಿಸುವಾ ಸಮಯ
ನಮ್ಮಿರ್ವರ ಸ್ನೇಹದಾ ಸೇತುವೆ ಮದುವೆಯಾ ಮನೆ ಅಂಗಳದಿ
ತುಟಿಗಳಲುಗಾಡದೆ ಹಾಡಿದವು ಹಾಡುಗಳ ಮನ ಮನದೊಳಗೆ
ಇಣುಕು ನೀ ಎನ್ನ ಅಂತರಾಳದಿ ನಾ ಇಣುಕುವೆ ನಿನ್ನ ಅಂತರಾಳದಿ

ಪರಸ್ಪರ ಬೆರೆಯೋಣ ಮನ ಬಿಚ್ಚಿ ನವಿಲುಗಳಂತೆ
ನಿನ್ನಪ್ಪಣೆಯಂತೆ ಕೇಳು ಹಸ್ತಲಾಘವ ಒಮ್ಮೆ
ಮೋಡ ಮೋಡಗಳೆರಡೂ ಕೂಡಿದಾಗ ಸುರಿದಾ ಮಳೆಯಂತೆ
ಮಳೆಯ ನೀರ ಹನಿಯನ್ನೆ ಕಾಯ್ದು ,ಕುಳಿತಿಹ ಜಾತಕ ಪಕ್ಷಿಯಂತೆ
ಕಾಯಿಸಬೇಡ ನನ್ನ ಸವಿಮಾತಿನಿಂದ ಸವಿಯೋಣ ಬಾ
ಬಾ ಪ್ರಿಯೆತಮೆ ಮದುವೆಯಾಗಿ ಬಾಳೋಣ ನಾವೀರ್ವರೂ
ಜೊತೆಗೂಡಿ
ನಮ್ಮೀರ್ವರ ಈ ಮೌನಗೀತೆಗೆ ನಿನ್ನಿಂದ ಸಮ್ಮತಿಯೇ ಪ್ರಿಯೆ

ಆಸರೆ

ಎಸ್ ಆರ್ ಗಿರಿಗೌಡ

ಮಲೆನಾಡಿನ ವನಸಿರಿಯ ಸೊಬಗನು ಸೂಸುತಿರುವಾ
ಕವಿ ಕಣ್ಣರಳಿಸಿ ವನದೈಸಿರಿಯ ಸೊಬಗಿನ ತಾಣವಾ
ಚಿಗುರೊಡೆದ ಮರದ ಮೇಲೆ ಕುಳಿತಿಹಾ ಕೋಗಿಲೆ
ಕುಹೂ ಕುಹೂ ಕೋಗಿಲೆಯ ನಾದವಾ ಕೋಗಿಲೆ ಕೊರಳಿಂದ
ಹೊಮ್ಮಿದಾ ಇಂಪಿಂದ ಕರ್ಣಾನಂದ ಈ ಮನಕೆ
ಕಣ್ಣಿಗಾನಂದ ಹಚ್ಚಹಸಿರಿನಿಂದ ಕಂಗೊಳಿಸುವ ವೃಕ್ಷಕಾನನ
ಮೌನದಿ ಕುಳಿತ ವನದಿ ಮೈಗೆ ಕಚಗುಳಿ
ಮನಸ್ಸಿಗಾನಂದ ತೀಡುವ ಮಲಯ ಮಾರುತ ಕುಳಿರ್ಗಾಳಿ
ಕಾನನದಿ ಹಾರಾಡುವ ಬಾನಾಡಿಗಳ ಇಂಪಿನ ಕಲರವ
ಬಾನಿಗೆ ಚುಂಬಿಸಲು ಬಾನೆತ್ತರಕೆ ಬೆಳೆದಿಹಾ ವೃಕ್ಷಗಳು
ಲತೆಗಳಿಗಾಸರೆ ವೃಕ್ಷಗಳಿಂದ ಸರೀಸೃಪಗಳಿಗೆ ಲತೆಗಳಾಸರೆ
ವನಕ್ಕೆ ಮಳೆಯಾಸರೆ ಮರಕ್ಕೆ ಭೂಮಿಯಾಸರೆ
ದುಂಬಿಗಳಿಗೆ ಸುಮಗಳಾಸರೆ ನದಿಗಳಿಗೆ ಹಳ್ಳಕೊಳ್ಳಗಳಾಸರೆ
ಕವಿಗಳಿಗಾಸರೆ ಪದಗಳು ಪದಗಳಿಗಾಸರೆ ಅಕ್ಷರಗಳು
ಅಕ್ಷರಗಳಿಗಾಸರೆ ಭಾಷೆ ಭಾಷೆಗಾಸರೆ ನಮ್ಮೀ ಭಾವನೆಗಳು

ಸಿರಿಗನ್ನಡಂ ಗೆಲ್ಗೆ

ಡಾ॥ ವಿಮಲಾ ದತ್ತ

ಕನ್ನಡವ ಮೆರೆಸುವೆವು
ಸಭೆ ಸಮಾರಂಭ ರಾಜ್ಯೋತ್ಸವದಂದು ಮಾತ್ರ
ಕನ್ನಡವ ಪೊಗಳುವೆವು
ವೇದಿಕೆಯ ಮೇಲೇರಿ ಹೊಗಳುಭಟ್ಟರೊಳು
ಕನ್ನಡದಿ ಹಾಡುವೆವು
ಇತಿಹಾಸ, ಸಾಹಿತ್ಯ, ಸಂಸ್ಕೃತಿಯ ಗುಣಗಾನ

ಆಟಗಾರ, ವಿಜ್ಞಾನಿ, ಸಾಹಿತಿ, ಕಲಾವಿದರ ಅದ್ಧೂರಿ ಸನ್ಮಾನ
ಬೆಳೆಸುವುದೆ ಕನ್ನಡವ?
ಪರಭಾಷೆ ಚಿತ್ರ ಬೇಡೆಂದು ಹೋರಾಟ ಕಲ್ಲು ತೂರಾಟ, ಪ್ರತಿಭಟನೆ
ಕನ್ನಡಕೆ ರಕ್ಷಣೆಯೆ?
ಪುಸ್ತಕ ಬಿಡುಗಡೆ, ಹುಟ್ಟುಹಬ್ಬ, ಶತಮಾನೋತ್ಸವ ಸಂಧಾನ
ಉಳಿಸುವುದೆ ಕನ್ನಡವ?
ವೈಭವದ ಮೆರವಣಿಗೆ, ಚರ್ಚೆ, ವಿಚಾರ ಸಂಕಿರಣ, ಸಮ್ಮೇಳನ
ಕನ್ನಡದ ಉನ್ನತಿಯೆ?
ಪ್ರಶಸ್ತಿ ಪ್ರಧಾನ, ಸಂಸ್ಕೃತಿ ಇಲಾಖೆ, ಅಭಿವೃದ್ಧಿ ಪ್ರಾಧಿಕಾರ ರಚನೆ
ಉದ್ಧರಿಸುವುದೆ ಕನ್ನಡವ?

ಮಾತುಕಥೆ ಹರಟೆಯಲಿ
ಓದು ಬರಹಗಳಲ್ಲಿ
ಅಚ್ಚ ಕನ್ನಡದ ನುಡಿ
ಎಲ್ಲೆಡೆಯು ಕೇಳಿರಲು

ಹಾದಿಬೀದಿಗಳಲ್ಲಿ
ಶಾಲೆ ಕಛೇರಿಗಳಲ್ಲಿ
ದೂರದರ್ಶನದ ಚಿತ್ರ
ಮಂದಿರ ರಂಗಭೂಮಿ
ಮೇಳ ಜಾತ್ರೆಗಳಲ್ಲಿ
ತಪ್ಪು ನೆಪ್ಪುಗಳಿರದ
ಮುತ್ತಿನಕ್ಷರದ ಲಿಪಿ
ಕನ್ನಡದ ಕಸ್ತೂರಿ
ಕಂಪು ಪಸರಿಸುತಿರಲು
ದೇವರನಾಮ ಭಾವ

ಗೀತೆ ಜಾನಪದಗಳ
ಸವಿಗನ್ನಡದ ಹೊನಲು
ಇಂಪಾಗಿ ಹರಿದಿರಲು
ಸಿರಿಗನ್ನಡದ ದೀಪ
ಮನೆಮನಗಳಲಿ ಬೆಳಗಿ
ಸಂತಸದಿ ನಗುತಿರಲು
ಅರಳುವುದು ಮುದದಿಂದ
ಕನ್ನಡಮ್ಮನ ಮೊಗವು.

ಮುತ್ತು ಮಲ್ಲಿಗೆ

ಆರ್ ಸಿ ರಾಜೇಂದ್ರ

ಮೌನವಾಗಿತ್ತು ಮಲ್ಲಿಗೆ
ನನ್ನವಳು ಬಂದಳು ಅಲ್ಲಿಗೆ
ನೋಡಿದಾಳಾಕೆ ಆ ಮಲ್ಲಿಗೆ
ಸಿಹಿ ಮುತ್ತನಿಟ್ಟಳು ಅಲ್ಲಿಗೆ
ಹೂ ಅರಳಿತು ಮೆಲ್ಲಗೆ

ನಾ ಹೋದೆ ಅಲ್ಲಿಗೆ
ನನ್ನ ನೋಡಿದಳು ಸುಮ್ಮಗೆ
ನಾ ತಂದಿದ್ದೆ ಮಲ್ಲಿಗೆ
ಅದ ಮುಡಿಸಲು ಅವಳ ಮುಡಿಗೆ
ನೋಡಿ ನಾಚಿ ನಕ್ಕಳು ಮೆಲ್ಲಗೆ

ನಾ ಕೇಳಿದೆ ಅವಳನ್ನು ಮೆಲ್ಲಗೆ
ನಾ ಮುಡಿಸುವೆ ಮುಡಿಗೆ ಮಲ್ಲಿಗೆ
ನೀ ಕೊಡುವೆ ಮುತ್ತನು ಗಲ್ಲಕೆ
ನಾ ಪಡೆವೆ ಅದನ್ನು ಸುಮ್ಮಗೆ
ನಾಚಿ ನೀರಾದಳು ನನ್ನಾಕೆ

ಬಂದಳು ಹತ್ತಿರ ಮಲ್ಲಗೆ
ನಾಚುತ್ತಲೇ ಸಿಹಿ ಮುತ್ತನ್ನಿಟ್ಟಳು ಎಲ್ಲಿಗೆ?
ನನ್ನ ಹೃದಯದ ಹೆಬ್ಬಾಗಿಲಿಗೆ
ನಾ ಅಪ್ಪಿಕೊಂಡೆ ಗಟ್ಟಿಗೆ
ಅಧರಕೆ ಅಧರ ಸೇರಿತು ಒಟ್ಟಿಗೆ

ನಿದ್ದೆಯ ಗಮ್ಮತ್ತು

(ಧಾಟಿ : ಹಾಯಾಗಿ ಮಲಗಿರು ನೀನು ರಾಣಿಯ ಹಾಗೆ. ಚಿತ್ರ: ಹಾಲು ಜೇನು)

ವಿ ಎಸ್ ಎನ್ ಸಿಂಹ

ಹಾಯಾಗಿ ಮಲಗಿರು ನೀನು ಗೌಡರ ಹಾಗೆ
ದೇವೆಗೌಡರ ಹಾಗೆ
ಆಯಾಸ ಪಡದಿರು ಇನ್ನೂ ನಡೆಯುತ ಹೀಗೆ
ಎಲ್ಲಾ ಓಟು ನಿನಗೆ ಕೊಡಿಸುವೆ
ನೀನೇ ಆಗ ಮೆಚ್ಚಿಕೊಳ್ಳುವೆ
ಪಬಬಂ ಪಬಬಂ ಪಬಬಂ ||ಹಾಯಾಗಿ||

ವಾಜಪೇಯಿ ಎಸ್ ಎಂ ಕೃಷ್ಣರು ಗಂಡಸರಲ್ಲವೇ
ನಿನ್ನ ಹಾಗೆ ಮೀಸೆ ಕಿತ್ತ ಮಹನೀಯರಲ್ಲವೇ
ಮಹನೀಯರಲ್ಲವೇ
ನೆನ್ನೆಯ ತನಕಾ ನೀನೇ ಮೆರೆದೆ
ಈ ಅಧಿಕಾರಕ್ಕೆ ಜೀವ ತೇದೆ
ಈ ಸಲವಾದರೂ ನನ್ನ
ಬಿಡದೇ ಗಲ್ಲಿಸು ಎನ್ನ
ಪಬಬಂ ಪಬಬಂ ಪಬಬಂ ||ಹಾಯಾಗಿ||

ಚಿನ್ನದಂಥ ರಾಜ್ಯವು ಇರಲು ಚಿಂತೆಯೇತಕೆ
ನಾಡನು ಮರೆತು ಮೆರೆಯುತಲಿರಲು
ಚಿಂತೆಯ ಮಾತೇಕೆ
ನೀ ಮಲಗುತಿರಲೂ
ನಮ್ಮೀ ದೇಶಕೆ
ಆ ನರಕವೇ ಜಾರಿತಂತೆ
ಪ್ರಭುಗಳು ಸೇವಕರಲ್ಲ
ಪ್ರಜೆಗಳು ದೇವರು ಅಲ್ಲ
ಪಬಬಂ ಪಬಬಂ ಪಬಬಂ ||ಹಾಯಾಗಿ||

ನನ್ನ ನಾಡು

ಆರ್ ಸಿ ರಾಜೇಂದ್ರ

ಕನ್ನಡ ನಾಡು ನನ್ನದು
ನಾನು ಬಿಡಲೊಲ್ಲೆ ಕರುನಾಡನ್ನು ಎಂದೂ
ನಾ ಹುಟ್ಟಿ ಬೆಳೆದಿದ್ದೆ ಕನ್ನಡಾಂಬೆಯ ಮಡಿಲಲ್ಲಿ ಇಂದು
ನಾ ದುಡಿಯುವೆ ಅವಳಿಗಾಗಿ ಎಂದೆಂದು
ಈ ಕನ್ನಡದ ಭಾಷೆ ನಂದು

ವೀರಾಧಿ ವೀರರು ಕವಿಕಲೆಗಾರರು
ಹುಟ್ಟಿ ಬೆಳೆದ ನಾಡು ಇದು ಎಂದೊ
ಕನ್ನಡ ಕಲೆ ಸಾಹಿತ್ಯ ಸಂಸ್ಕೃತಿ ಶೋಭಿಸುತ ಇರಲಿ ಎಂದೆಂದು
ಸಾರಿ ಹೇಳೋಣ ಪ್ರಪಂಚಕ್ಕೆ ಕನ್ನಡವೆ ಶ್ರೇಷ್ಠ ಎಂದು
ಈ ಕನ್ನಡ ನಾಡು ನಂದು

ಕವಿ ಕುವೆಂಪು, ಬೇಂದ್ರೆ, ಮಾಸ್ತಿ, ದಾಸರು
ಬರೆದು ಹಾಡಿ ಹೊಗಳಿದರು ನಾಡನ್ನು ಎಂದೊ
ಇದುವೆ ನಮ್ಮ ಚಲುವ ಕನ್ನಡ ನಾಡು
ಶ್ರೀಗಂಧದ ಶ್ರೀಮಂತಿಕೆಯ ಬೀಡುಎಂದು
ಕನ್ನಡನಾಡು ನಂದು

ಬನ್ನಿರಿ ಸಹೋದರ ಸಹೋದರಿಯರೆ ಎಂದೆಂದು
ದುಷ್ಟರು ಕುಮಕಿಗಳು ಕಾಲಿಕ್ಕರೆ ಕರುನಾಡಿಗೆಂದು
ಸಂಹರಿಸೋಣ ಅವರನ್ನು ಭುವನೇಶ್ವರಿಗೆ ಬಲಿ ಎಂದು
ಕೆಚ್ಚೆದೆಯಿಂದ ಹೇಳಿ ಕನ್ನಡನಾಡು ನಂದು ಎಂದು
ಭುವನೇಶ್ವರಿ ಕಾಯುವಳು ಎಂದೆಂದು

ಬಾಳಿನ ಬಣ್ಣ

ಕೆ ವಿ ನಾಗಚರಣ್

ಬಾಳು ನೀ ಮೂರು ದಿನ
ಮೆಚ್ಚೋ ಹಾಗೆ ನೂರು ಜನ
ತೋರಬೇಡ ನೀ ಬಣ್ಣದ ಮುಖವನ್ನ
ತೋರು ನೀ ಮನಸ್ಸಿನ ಪ್ರೀತಿಯನ್ನ
ಬಣ್ಣದ ಮುಖಕ್ಕೆ ಬರುವ ಜನ
ನೀ ಚಿತೆಯನ್ನೇರಿದ ಕ್ಷಣ
ಹಿಡಿಯುವರು ಅವರ ಮನೆಯ ಹಾದಿಯನ್ನ
ಪ್ರೀತಿಗೆ ಬರುವ ಜನ
ಉಳಿಯುವರು ನಿನ್ನ ಜೀವನದಲ್ಲಿ
ಕ್ಷಣ ಕ್ಷಣ

ನೀ

ಕೆ ವಿ ನಾಗಚರಣ್

ನೀ ಹಾಕಿದೆ ನನ್ನ ಮನದ ಅಂಗಳದಲ್ಲಿ
ಪ್ರೀತಿಯ ರಂಗೋಲಿ
ಚೆಲ್ಲಿದೆ ನೀ ನಗುವೆಂಬ ಬಣ್ಣವನ್ನು ಅಲ್ಲಿ
ಕಂಡೆ ನಾ ನಿನ್ನ ಮುಖವನ್ನು
ನನ್ನೀ ಬಾಳಿನ ಕನ್ನಡಿಯಲ್ಲಿ
ನಿನ್ನೀ ಪ್ರೀತಿಯ ಕಡಲಲ್ಲಿ
ನಾ ಸಾಗ ಬಯಿಸಿದೆ ಪುಟ್ಟ ದೋಣಿಯಲಿ

ಸಾವಿನ ನೆರಳು

ಕೆ ವಿ ನಾಗಚರಣ್

ಒಂದು ದಿನ ನೀ ನಡೆದರೆ ಮುಂದೆ
ಸಾವಿನ ಹತ್ತಿರ ನೀ ಬಂದೆ
ಸಾವೊಂದು ನೆರಳು
ರಾತ್ರಿ ಹಗಲು
ನಿನ್ನಯ ಬೆನ್ನಿನ ಹಿಂದೆ
ಬೆಳಕಿನೆಡೆಗೆ ನಡೆದರೆ ನೀನು
ನೆರಳು ನಿನ್ನಯ ಹಿಂದೆ
ಹೆದರಿ ನಡೆಯದೆ ನಿಂತರೆ
ಬರುವುದು ನೆರಳು ನಿನ್ನಯ ಮುಂದೆ
ಸಾವನ್ನು ಎದುರಿಸಿ ನಡೆ ನೀ ಮುಂದೆ
ಕಾಣುವೆ ಜಯ ಅಂದೆ

ಕಪ್ಪು ಕೂಗು

ಕೆ ವಿ ನಾಗಚರಣ್

ನಾ ಬಂದೆ ಎಲೆ ಮರೆಯ ಕಾಯಾಗಿ
ಅರಳಿದೆ ಕಪ್ಪನೆಯ ಹೂವಾಗಿ
ನೋಡುವರು ನನ್ನ ಎಂದು ಭ್ರಮಿಸಿ
ತೂಗಿದೆ ಗಾಳಿಯಲ್ಲಿ ಬೀಸಿ
ಎಲ್ಲ ಕಂಡರು ನನ್ನ ಕಪ್ಪನೆಯ ಹೂವೆಂದು
ಕಾಣದೆ ಹೋದರು ಬಿಳುಪಿನ ಒಳ ಹೃದಯ ಇಂದು
ಆದರೂ ಅಸೆಯ ಹೊತ್ತು ಅರಳಿದೆ
ಸೇರಲು ದೇವರ ಮುಡಿಗೆ
ಬೇಡಲು ದೇವರನು ವರ ಒಂದೆ
ತೂಗದಿರು ಬಣ್ಣವನು ಗುಣದ ಮುಂದೆ

ಮಕ್ಕಳು

ಜಿ ಶ್ರೀನಿವಾಸ

ಮಕ್ಕಳು ಇರುವುದು ಮುದ್ದಾಗಿ
ಅವರು ಆಡುವುದು ಒರಟಾಗಿ
ಅವರ ಮನಸ್ಸು ಇರುವುದು ಮೃದುವಾಗಿ
ಅವರ ಜ್ಞಾನ ಇರುವುದು ಸೂಕ್ಷ್ಮವಾಗಿ
ಕೊಡಬೇಕು ಆಹಾರವನ್ನು ಹಿತವಾಗಿ
ಮಕ್ಕಳನ್ನು ಸಾಕಬೇಕು ಚೆನ್ನಾಗಿ
ವಿಧ್ಯೆಯನ್ನು ಕೊಡಿಸಬೇಕು ಹೆಚ್ಚಾಗಿ
ಮುಂದೆ ಬದುಕುತ್ತಾರೆ ಚೆನ್ನಾಗಿ

ತುಳಸಿ

ಜಿ ಶ್ರೀನಿವಾಸ

ತುಳಸಿ ಮನೆಯ ಮುಂದೆ ಬೆಳಸಿ
ಸುಂದರವಾದ ಹೂವುಗಳಿಂದ ಅಲಂಕರಿಸಿ
ಭಕ್ತಿಯೆಂಬ ಭಾವನೆಯಿಂದ ಪೂಜಿಸಿ
ಕಡ್ಡಿ ಕರ್ಪೂರಗಳಿಂದ ಜ್ಯೋತಿಯನ್ನು ಬೆಳಗಿಸಿ
ಮುಕ್ತಿಯೆಂಬ ಫಲವನ್ನು ಗಳಿಸಿ

ಡ್ಯಾಡಿ ಗಾಡಿ

ಜಿ ಶ್ರೀನಿವಾಸ

ಡ್ಯಾಡಿ ಕೊಡಿಸಿ ಬೇಗ ನನಗೊಂದು ಗಾಡಿ
ದಿನ ನಡೆದುಕೊಂಡು ಓಡಾಡಿ
ಬೆಂಡಾಗಿದೆ ನನ್ನ ಬಾಡಿ

ಡ್ಯಾಡಿ ಹೋಗಬೇಕು ನಾನು ಬಸ್ಸಿಗಾಗಿ ಓಡೋಡಿ
ಇದನ್ನು ಸ್ನೇಹಿತರು ನೋಡಿ
ಹೀಯಾಳಿಸುತ್ತಾರೆ ನನ್ನ ಬಗ್ಗೆ ಮಾತಾಡಿ

ಡ್ಯಾಡಿ ನನ್ನ ಈ ಅವಸ್ಥೆ ನೋಡಿ
ನೀವು ಹೇಗಾದರು ಮಾಡಿ ತೆಗೆದುಕೊಡಿ ಒಂದು ಗಾಡಿ
ನಂತರ ನನ್ನ ಮಾರ್ಕ್ಸ್ ಕಾರ್ಡ್ ನೋಡಿ

ಬಾಡಿ ಗಾಡಿ

ಜಿ ಶ್ರೀನಿವಾಸ

ಬಾಡಿಗೆ ತಕ್ಕಂತೆ ಗಾಡಿ
ಸರಿಯಾಗಿ ಓಡಿಸೋನ್ನ ನೋಡಿ
ಇಲ್ಲಾಂದ್ರೆ ಹೊಡೆಸ್ಕೋಂತೀರ ಬೋಡಿ
ಮೊದಲು ಬ್ರೇಕ್ ಅಪ್ಲೈ ಮಾಡಿ
ಇಲ್ಲಾಂದ್ರೆ ಮುಂದೆ ಬೀಳುತ್ತೆ ಬಾಡಿ

ಆಸೆ

ಜಿ ಶ್ರೀನಿವಾಸ

ಮಾನವನ ಆಸೆಗೆ ಮಿತಿ ಇಲ್ಲ
ಕೇಳುವುದಕೆ ಕೊನೆ ಇಲ್ಲ
ಮಾನವ ಆಸೆಯ ಪ್ರತಿರೂಪ
ಬದುಕು ಬಯಕೆಗಳ ಕೂಪ

ಆಸೆಯ ಚಪಲಕೆ ತಡೆಯುಂಟೆ
ಮೋಸದ ನಂಬಿಕೆ ಬಿಡದುಂಟೆ
ಹೊನ್ನು ಹೆಣ್ಣು ಮಣ್ಣುಗಳಾಸೆ
ಅಧಿಕಾರ ಅಂತಸ್ತು ಕೀರ್ತಿಯಾಸೆ
ಸ್ವಾರ್ಥ ವಂಚನೆ ಇಹ ಪರದಲ್ಲಿ
ಮರುಳು ಮಾನವ ಅರಿಯುವುದೇ ಇಲ್ಲ

ಬ್ರಹ್ಮ ಸೃಷ್ಠಿ ಬದುಕಿಗೆ ಪುಷ್ಠಿ
ಒದ್ದಾಡಿದರೂ ಒಗ್ಗೂಡುವವರಲ್ಲ
ಗುದ್ದಾಡಿದರೂ ಎಟುಕದು ಎಲ್ಲಾ

ಆಸೆಯು ಮುಂದೆ ಮನಸ್ಸಿದೆ ಹಿಂದೆ
ಅತಿಯಾದುದು ಹಿತವಾಗದು ಎಂದೆ
ಈ ವಿಚಿತ್ರ ವರ್ತನೆ ವಿಶ್ವಕೆ ಸಲ್ಲದು
ವಿಶ್ವದ ರಹಸ್ಯ ಅರಿಯಿರಿ ಎಲ್ಲಾ

ಹೇಳಲಾರೆನು ಹಾಡಿ

ಬಿ ಬಿ ಚಿನ್ಮಯ ಕುಮಾರ

ನಾ ಬಾಳಲೆಳಸುವೆನು ಜಗದಗಲ ಭುವಿಯೊಳಗೆ
ಕ್ಷುದ್ರ ಬೇಧಗಳನೆಲ್ಲ ತೊರೆದಂತ ಮನುಜನೊಲು
ಜೀವ ಜೀವರನೆಲ್ಲ ಪ್ರಾಣಕ್ಕೆ ಸಮವೆನುವ
ಮನುಜ ಮೌಲ್ಯಂಗಳ್ಗೆ ನಿರ್ಮಾಲ್ಯ ಗುಣವೀವ
ಸರ್ವಹಿತ ಜ್ಞಾನದಿಂದೊಗೆದ ವಿಜ್ಞಾನದೊಲು
ಸರ್ವವಿಧ ವೈವಿಧ್ಯ ವೈಶಾಲ್ಯ ಶರಧಿಯೊಳು
ವ್ಯರ್ಥ ಜೀವನ ತೊರೆದ ಅರ್ಥ ರವಿಕಿರಣದೊಲು
ನಾ ಬಾಳಲೆಳಸುವೆನು ಈ ಜಗದ ಭುವಿಯಲ್ಲಿ
ಬರಿ ಮಾತಿನಿಂ ನಾನು ಹಾಡಲಾರೆನು ಹಾಡಿ
ಸುವಿಶಾಲ ಮನಕೊಗಲು, ಬೇಕೆ ಮಾತಿನ ಮೋಡಿ
ಭಸ್ಮವಾಗುವ ವಸ್ತು ಭೂಭಾರ ಕಳೆವಂತೆ
ಅಳಿದು ಹೋಗಲಿ ಕೊನೆಗೆ ಧೂಳಿನೊಳಗೆ

ಮಂಜು ಗಣ್ಣೆ

ಬಿ ಬಿ ಚಿನ್ಮಯ ಕುಮಾರ

ನಾಟ್ಯ ಛವಿಯ ವದನದಂತೆ
ಮಂಜು ರಾಶಿರಾಶಿಯಂತೆ
ನಿನ್ನ ಮೊಗವು ನಿನ್ನ ಮನವು
ಉರಿವ ಕೆಂಡದಂಚಿನೊಳಗೆ
ನೀಲ ಮಂಜು ಬೆಳಕಿನಂತೆ
ನಿನ್ನ ನಯನ ಮಂಜುಗಣ್ಣೆ
ಬೆಳಗು ಹಿಮದ ಮಣಿಯ ಕೂಡಿ
ನಿನ್ನ ನೋಟ ಸ್ವಪ್ನದಿಟ್ಟಿ
ನೀಲ ನೀಳ ರಾಶಿ ಗೂಡಿ
ನೀಲ ನೀಳ ಕೇಶ ಮಾಡಿ
ಗಾಳಿಗೂಡಿ ಸರಸವಾಡಿ
ನಾಗರಾಗಿ ಬೆನ್ನಕೊಡಿ
ಪಾಶದಂತೆ ಹಾಸದಂತೆ
ಹರಿಣದಂತೆ ವರುಣನಂತೆ
ನೋಡ ನೋಡೆ ಮಾಯವಾದೆ

ಕೋಕೋ ಕೋಲಾ

ಬಿ ಬಿ ಚಿನ್ಮಯ ಕುಮಾರ

ಡೋಲರೆ ಡೋಲರೆ ಡೋಲಾ ಡೋಲಾ
ಕೋಲರೆ ಕೋಲರೆ ಕೋಕೋ ಕೋಲಾ
ಕುಡಿದರೆ ನಿಮಗೆ ಸಾವಿನ ಮೂಲಾ
ಕೋಲರೆ ಕೋಲರೆ ಕೋಕೋ ಕೋಲಾ
ಬದುಕಿಯು ಉಳಿದರೆ ಕೇಡುಗಾಲಾ
ಹೊಟ್ಟೆಯ ಹುಣ್ಣು ಕುರುಡರ ಕಣ್ಣು
ಮೂತ್ರಪಿಂಡ ಎಲ್ಲವು ದಂಡ
ಜೀವನ ಪೂರ್ತಿ ನರಳಿಕೆ ತರುವ
ಕೋಲರೆ ಕೋಲರೆ ಕೋಕೋ ಕೋಲಾ

ಧಿನ್‌ಧಕ್ಕ್ ಧಿನ್‌ಧಕ್ಕ್

ಬಿ ಬಿ ಚಿನ್ಮಯ ಕುಮಾರ

ಧಿನ್‌ಧಕ್ಕ್ ಧಿನ್‌ಧಕ್ಕ್ ಧಿನ್‌ಧಕ್ಕ್ ಧಿನ್
ಯುವಕರ ಮನಸಿನ ಮಿಡಿತದ ಧುನ್
ಕಿವಿಯಲಿ ಮೊರೆದಿದೆ ಯೌವ್ವನದ ಝುನ್
ಪ್ರತಿ ಹಾಡಿಗು ಕುಣಿದಿದೆ ಹೃದಯದ ಜುಮ್
ನೆಚ್ಚುವ ಮೆಚ್ಚುವ ಮನವನು ತೆರೆದಿದೆ
ಉನ್ಮಾದದ ಝುರಿಯಲಿ ಮಿಂದಿದೆ ಕಣ್
ಕುಣಿದಾಡುವ ಹಾಡುವ ಲಹರಿಯ ನಾಣ್
ಹರಿದಿದೆ ಬಿರಿದಿದೆ ನವಯುಗದಲಿ ತಾನ್
ಧಿನ್‌ಧಕ್ಕ್ ಧಿನ್‌ಧಕ್ಕ್ ಧಿನ್‌ಧಕ್ಕ್ ಧಿನ್

ಮೆದುಳೆಂಬ ಮಹಾದ್ಭುತ

ಬಿ ಬಿ ಚಿನ್ಮಯ ಕುಮಾರ

ಯುಗಯುಗಾಂತರದ ವಿಶೇಷ ಕುಲುಮೆಯಲಿ
ಕಣ್ಣು ಹೃದಯಗಳಿರದ ಮೂಕ ಕಿವುಡನ ತೆರದ
ಪ್ರಕೃತಿಯೆನುವ ವಿಕೃತಿಯು, ಮೆದುಳೆಂಬ ಅದ್ಭುತವ
ಸೃಜಿಸಿರುವುದೆನುವ ಪುರಾವೆ ಬೇಕೇ ನಿಮಗೆ?
ತೆರೆದು ನೋಡಿರಿ ನಿಮ್ಮ ಮೆದುಳೆಂಬ ಪೆಟ್ಟಿಗೆಯ!
ತಡಕಿ ನೋಡಿರಿ ಅದರ ಅರಿಯದಿಹ ಎಳೆಗಳನು!?
ಅಲ್ಲಿ ನೆಲೆಸಿಹುದೆಲ್ಲ ಯುಗ ಜಗದ ಆದಿ ವಿಶ್ವ ಕೋಶ
ಸಗ್ಗನರಕಗಳ ಕತೆಯ ಪುರಾಣ ರಾಗಗಳೆಲ್ಲ
ಕಲ್ಪನೆಯ ಕಲ್ಪವೃಕ್ಷದಾ ಹಗಲುಗನಸುಗಳೆಲ್ಲ
ಗಂಧರ್ವ ಕಿಂಪುರುಷರಾದಿ ಹಲವರು ಎಲ್ಲ
ಬೊಮ್ಮ ತಿಮ್ಮರದೆಲ್ಲ ಲೀಲೆಗಳ ಒಡಗೂಡಿ
ಗುಮ್ಮನಾಗುಸುಕರ ಗುಂಪು ಕಪ್ಪು ಗವಿಗಳ ಒಳಗೆ
ಎದ್ದೆದ್ದು ಕುಣಿದಿಹವು ಏರು ಸಾಗರದಂತೆ!
ಮಾನವನ ಮೆದುಳೆಂಬ ಪ್ರಕ್ಷುಬ್ಧ ಸಾಗರದೆ?
ಶತೃಷಡ್ವರ್ಗಗಳನು ಕರುಬು ಅಹಂಕೃತಿಗಳನು
ಕೊಲ್ಲಲಾರದೆ ನಲುಗಿ ಎಲ್ಲಿಹೋದರೊ ಎಂತೊ
ಅಲ್ಲೆ ಜನಿಸಿದ ಜೊಂಡು ದೇವ ದೇವತೆಗಳ ಹಿಂಡು
ಕ್ರಿಸ್ತ, ಬುದ್ದರ ಜೊತೆಗೆ ಅಲ್ಲ ಕೃಷ್ಣರ ದಂಡು
ರಾವಣನೆನುವ ಮಹಾ ಹಾರುವನು ಮಾನವರದೇಹ
ಮಾಂಸವ ತಿನುವ ರಾಕ್ಷಸನ ಮಾಡಿರುವ ಕತೆಗಳುಂಟು
ಹಿಟ್ಲರ್ ಲಾಡೆನ್ ಬುಷ್ಯ ಸದ್ದಾಮನಂತಿರುವ
ಎಣಿಕೆಗೂ ಮಿಗಿಲಾದ ದಿಟದ ಮನುಜರುಂಟು
ಜಾತಿ ಉಪಜಾತಿಗಳ ಕೋಟೆಯನು ಕಟ್ಟುತ್ತ
ಶಂಬುಕನ ಕೊಂದಂತ ರಾಮನೆಂಬುವ ರಾಜ
ಸಾಗರವ ದಾಟಿದಾ ಹನುಮನೆಂಬುವ ಕಪಿಯು
ಯಾವ ಮಹಾರ್ಥಗಳಿಹವೊ ಈ ಎಲ್ಲ ಕತೆಗಳಲಿ
ಜನಿಸಿಹುದು ಈ ಎಲ್ಲ ರಾಜ್ಯ ಸಾಮ್ರಾಜ್ಯಗಳ ಲೋಕ
ಮಾನವನ ಮೆದುಳೆಂಬ ಗರ್ಭಕೋಶದ ಒಳಗೆ
ಕೊಲ್ಲುವಾ ನರಳಿಸುವ ಅಸ್ತ್ರ ಶಸ್ತ್ರಗಳ ರಾಶಿ
ಉದಿಸಿ ಬಂದವು ಮೆದುಳ ಕೋಟೆಯೊಳಗಿಂದ

ಎಲ್ಲರನು ತನ್ನಡಿಯ ದೈತ್ಯ ಹೆಜ್ಜೆಗಳಡಿ ತುಳಿದು
ನರಕವನೆ ಸೃಜಿಸಿಹರು ಏಳು ಬಿಲಿಯನ್ ಜನರು
ತಾವೆ ಈ ಜಗದ ಜುಟ್ಟು ಹಿಡಿದಿಹ ಬಲರೂ ಎನುತ
ಜೀವ ಜಾಲವ ಸುಲಿದು ಮೆರೆದಿಹನೀ ಕ್ಷುದ್ರಜಂತು
ಸರ್ವಭಕ್ಷಕನ ತೆರದಿ, ಭುವಿಯೆಂಬ ಅದ್ಭುತವ
ಛಿದ್ರ ಮಾಡ ಹೊರಟಿಹರು ಬೆರಳೆಣಿಕೆ ಮಂದಿ
ಸಾವ್ ಇರದ ವರಪಡೆದ ಹುಂಬ ದನುಜನ ತೆರದಿ
ಸಾವ ಮರೆತವನಂತೆ ಹಚ್ಚೆದ್ದು ಕುಣಿಯುತಿಹ
ಛಿದ್ರವಾದರೆ ಭುವಿಯು ಎಲ್ಲಿ ಅಡಗುವರಿವರು
ಅನುಕಂಪ ದಯೆಪ್ರೀತಿ ಸದ್ಭಾವ ಸಲಿಲದಲಿ
ವಿಷಜ್ವಾಲೆ ಮರೆಸಿತೇ ಈ ಮೆದುಳ ಲೋಕದಲಿ
ಬದಲಿ ಮಾನವರಿಹರೆ! ದೂರ ವಿಶ್ವ ಪಾರಾವಾರದಲಿ?
ನೋಡಲಾಗದವನಂತೆ ಚಿಕ್ಕೆ ಚಂದ್ರಮರಾ ಮೇಲಿರುವ
ಮನುಜರಾದರೂ ಒಲಿದು ಬದಲಿಸರೆ ಇಲ್ಲಿಗೈತಂದು
ಈ ಭುವಿಯ ಮಾನವನೆ ಮಹಾ ವಿಕೃತಿ ಜಂತು
ಮನಸಿರುವ ಮಾನವನೆನುವ ಸರ್ವ ಭಕ್ಷಕನ ಪರಿಯ
ಆಳವರಿಯದ ಮೇದುಳ ಭಾವ ಲೋಕವ ತಿದ್ದಿ
ಬೆಳಕಿರದ ಕಗ್ಗವಿಯ ಮಿಗವ ಪಳಗಿಸಲರಿದು!
ಮಿತಿಯಿರದ ಆಸೆಗಳ ಆಗಸದ ಏ(ದೋ)ಣಿಯಲಿ
ತೇಲಿ ಮುಳುಗುತಲಿಹುದು ಮೆದುಳೆಂಬ ಅದ್ಭುತವು

ಸ್ಪಷ್ಟಾರ್ಥ: ಕಣ್ಣು ಹೃದಯಗಳಿರದ ಮೂಕ ಕಿವುಡನ ತೆರದ ಪ್ರಕೃತಿಯು ಮಾನವನನ್ನು ನಿರ್ಮಿಸಿ, ಅದರ ಆ ಗುಣಗಳನ್ನೆ ಅವನಲ್ಲಿ ತುಂಬಿದೆ! ಬದಲಿ ಮಾನವರಿಹರೆ! = ದೂರದನಂತ ನಕ್ಷತ್ರಗಳಲ್ಲಿ ಮಾನವನಿಗಿಂತಲೂ ಮಿಗಿಲಾದ ಅತಿ ಮಾನವರಿಹಬಹುದೇ? ಎನುವ ಆಶಾಭಾವನೆ. ನೋಡಲಾಗದವನಂತ ಚಿಕ್ಕೆಚಂದ್ರರ ಲೋಕ = ಅನಂತ ನಕ್ಷತ್ರರಾಶಿಗಳಲ್ಲಿ, ಭುವಿಯಂತಿರುವ ಅನೇಕ ಗ್ರಹಗಳಲ್ಲಿ ಜೀವ ಉದಿಸಿರಲೇ ಬೇಕೆಂದು ವಿಜ್ಞಾನಿಗಳ ವಾದ.

ಬೇವು ಬೆಲ್ಲ

ಸಿ ಅಪ್ಪಾಜಿ

ಯುಗಾದಿಯ ಬೇವುಬೆಲ್ಲ
ಇದು ಯುಗಾದಿಯ ಬೇವುಬೆಲ್ಲ ॥ಪಲ್ಲವಿ॥

ಸುಖಃ ಒಂದೇ ಇರದು
ದುಖಃ ಕೈ ಬೀಸಿ ಕರೆವುದು ॥ಸುಖಃ॥
ಜೊತೇಲಿ ಬಂದಿದೆ ಬೇವುಬೆಲ್ಲ
ಇದು ಯುಗಾದಿಯ ಬೇವು ಬೆಲ್ಲ

ಬೇವಿನ ಕಡ್ಡಿಲಿ ಹಲ್ಲನು ಉಜ್ಜಿ
ಎಣ್ಣೆ ಸೀಗೆಕಾಯಿ ಮೈಗೆ ಹಚ್ಚಿ ॥ಬೇವಿನ॥
ಮನಃ ಶಾಂತಿಯಿಂದ ಸ್ನಾನ ಮಾಡಿ
ದೇವರಿಗೆ ಕೈ ಮುಗಿದು
ಗುರು ಹಿರಿಯರಿಗೆ ಶರಣಾಗಿ
ಸೇವಿಸಬೇಕು ಬೇವು ಬೆಲ್ಲ ॥ಯುಗಾದಿ॥

ಮಕ್ಕಳ ಸಡಗರ ಹಿರಿಯ ಹರುಷ
ತುಂಬಿ ಹರಿವುದು ಮನೆಗಳಲಿ ॥ಮಕ್ಕಳ॥
ಪ್ರತಿ ವರುಷ ಮರಳಿ ಮರಳಿ ಬರುವುದು
ಪ್ರತಿ ದಿವಸ ಈ ರೀತಿ ಸಿಗದು ಬೇವು ಬೆಲ್ಲ
ಇದು ಯುಗಾದಿಯ ಬೇವು ಬೆಲ್ಲ ॥

ಹನಿಗವನಗಳು

ಸಿ ಅಪ್ಪಾಜಿ

೧. ಒಂದು ಹೂವಿನ ತೋಟದಲಿ
ಹತ್ತಾರು ಹೂವ ಕಂಡೆ
ಹತ್ತಾರು ಹೂವಿನಲ್ಲಿ ಒಂದು ಹೂ ಆರಿಸಿಕೊಂಡೆ
ಆ ಹೂವಿನ ಪರಿಮಳ ನಾ ಹೇಗೆ ಬಣ್ಣಿಸಲಿ?

೨. ಮೊಗ್ಗೊಂದು ಅರಳಿದ ಹೂವಿನ ಹಾಗೆ
ಹೆಣ್ಣಿನ ಚಲವು ಚಂದ
ತಾವರೆ ಹೂವಿನ ಪರಿಮಳದಂತೆ
ಹೆಣ್ಣಿನ ಮೊಗವೆ ಅಂದ!

೩.ಅಮ್ಮನು ಹೆಣ್ಣು ಅಕ್ಕನೂ ಹೆಣ್ಣು
ತಂಗಿಯು ಹೆಣ್ಣು ಅತ್ತೆಯೂ ಹೆಣ್ಣು
ಹೆಂಡತಿಯೂ ಹೆಣ್ಣು ಕೇಳಿ
ಆ ಹೆಣ್ಣಿಗೆ ಆಸೆಯ ಪಡುವ ಜೀವನ
ಹೇಳಿ ಯಾರಿಗೆ ಬೇಡ ಯೌವನ?

೪. ಹೆಣ್ಣೇ ನೀನೆಂತ ಮಾಯೇ
ಅರಿಯದೆ ಹೋದೆ ತಿಳಿಯದೆ ಹೋದೆ
ನಿನ್ನಯಾ ಪ್ರೀತಿಗೆ ನಾ ಬಲಿಯಾದೆ!

ನಿನ್ನಂತೆ ನೀನು ಮಾನವ

ಸಿ ಅಪ್ಪಾಜಿ

ನಿನ್ನಂತೆ ನೀನು ನಿನಗಿಲ್ಲ ಯಾರು
ಬರಿ ನೋವು ತುಂಬಿದೆ ಮನಸಲಿ
ಬರಿನೋವೆ ತುಂಬಿದೆ ಎದೆಯಲಿ ॥ನಿನ್ನಂತೆ॥

ಸ್ನೇಹಕೆ ಪ್ರಾಣವ ಕೊಡುವೆ ನೀನು
ಪ್ರೀತಿಯಾ ತೋರುತಾ ಅನುದಿನವು ॥ಸ್ನೇಹ॥
ನಿನ್ನ ಹೃದಯವು ಮಣ್ಣಿಂದ ಮಾಡಿದೆ
ಕೆಳಗೆ ಬಿದ್ದರೆ ಚೂರು ನೀನು ॥ನಿನ್ನ॥
ಕೆಳಗೆ ಬಿದ್ದರೆ ಚೂರು ನೀನು ॥ನಿನ್ನಂತೆ॥

ನಿನ್ನ ದೇಹವು ಗಾಳಿಯ ಪಟವು
ಸೂತ್ರವ ಹಿಡಿದ ಆ ದೇವನು ॥ನಿನ್ನ॥
ಯಾರದೋ ಪ್ರೇಮಕೆ ಯಾರದೋ ಸ್ನೇಹ
ತಿಳಿಯದ ಹಾಗೆ ತಂದಿಡುವ ॥ಯಾರದೊ॥
ಮನಃ ಶಾಂತಿಯ ಅವನು ಕದಡಿಸುವ ॥ನಿನ್ನಂತೆ॥

ವಿಧಿಯಾ ಆಟ

ಸಿ ಅಪ್ಪಾಜಿ

ನಿನ್ನಾ ಆಟವೋ..... ವಿಧಿಯೇ.....
ನಾ ಕಲಿಯಬೇಕಾದ ಮೊದಲ ಪಾಠವೊ.....
ಇದು ಸೂತ್ರದ ಗೋಂಬೆಆಟವೋ..... ॥ನಿನ್ನಾ॥

ಬಡತನ ಇದ್ದಾಗ ತಂದೆ ತಾಯಿ
ಅಣ್ಣ ತಮ್ಮ ಅಕ್ಕ ತಂಗಿ ಎಲ್ಲಾ
ಸಿರಿತನ ಬಂದಾಗ ತಮಗೆ ತಾವೆ ಎನ್ನುತಿರುವರಲ್ಲಾ

ನನ್ನ ಪ್ರೀತಿಸಿದ ನನ್ನ ಪ್ರೇಯಸಿಯು
ನನ್ನ ಬಿಟ್ಟು ದೂರ ಹೋದಳಲ್ಲಾ
ನನ್ನ ಬದುಕು ಬರಡಾಯಿತಲ್ಲಾ ॥ನಿನ್ನಾ॥

ಪರದೆಯ ಮೇಲೆ ಆಡುವ ಗೊಂಬೆಗಳು ನಾವು
ಪರೆದೆಯ ಮರೆಯಲಿ ನಿಂತು ತೆರೆಯನು ಎಳೆವ
ಸೂತ್ರಧಾರಿ ನೀನು ಪಾತ್ರಧಾರಿಗಳು ನಾವು ॥ನಿನ್ನಾ॥

ಸುನಾಮಿ

ಸತ್ಯಪ್ರಸಾದ್

ಸಾಗರತಳದಿ ಅವನಿಗರ್ಭದಿ
ಬಡಿಯಿತು ಭೂಕಂಪನ ಒಂದು ।
ಸುನಾಮಿ ಅಲೆಗಳು ಗಗನಕೆ ಚಿಮ್ಮಿ
ಹರಿದವು ವೇಗದಿ ಮುಂದ್ಮಂದು ॥

ಸಿಕ್ಕಿದ ಕಾಡು ಪಕ್ಕದ ನಾಡು ನಲುಗಿತು
ಅಲೆಗಳ ಆರ್ಭಟದಿ ।
ನುಗ್ಗಿದ ಅಲೆಗಳ ಅಬ್ಬರ ಸಹಿಸದೆ
ಜಗ್ಗಿತು ಗುಡಿಸಲು ಮನೆಗಳು ಕ್ಷಣಾರ್ಧದಿ ॥

ಬೆಸ್ತರ ದೋಣಿಯ ಪುಡಿ ಪುಡಿ ಮಾಡುತ
ಬೆಸೆದ ಸಂಬಂಧದ ಕೊಂಡಿಯ ಕಳಚುತ ।
ಸಾಯುವ ಜೀವದ ರೋದನೆ ತಾಳಕೆ
ರುದ್ರ ನರ್ತನದಿ ಸ್ಪಂದಿಸಿತು

ಮಿಂಚಿನ ವೇಗದಿ ಸಂಚನು ಹೂಡಿ
ಒಯ್ದಿತು ಸಾವಿಗೆ ಜೀವರಾಶಿಗಳ ।
ಸುಳಿವನೆ ತಿಳಿಯದ ಮುಗ್ಧ ಜೀವಿಗಳು
ಸೇರಲು ಸಾವಿನ ದವಡೆಗಳ ॥

ಕೆಲವು ತಾಸುಗಳ ಪ್ರಕೃತಿ ವಿಕೋಪ
ತಂದಿತು ಜನರಿಗೆ ಬೇಗುದಿ ತಾಪ ।
ಪ್ರಕೃತಿ ವಿನಾಶದ ತಪ್ಪಿಗೆ ಶಾಪ
ಮನುಜನೆ ಪಡು ನೀ ಪರಿತಾಪ ॥

ಪ್ರಕೃತಿಯ ಪೋಷಿಸಿ, ಪರಿಸರ ಉಳಿಸು
ತಾಯಿ ವಸುಂಧರೆಯ ಸಂತೈಸು ।
ಮಾತೆಯ ಸೇವೆಯು ನಿನಗದು ಮಂತ್ರ
ಜೀವರಾಶಿಗಳ ಯಶಸ್ಸಿಗೆ ತಂತ್ರ ॥

ಸಂತಾಪಗಳು ಗತಿಸಿದ ಜೀವಕೆ
ಸಂತ್ರಸ್ಥರಿಗೆ ಪರಿಹಾರ ।
ನೆರವನು ನೀಡು ಮಾನವ ನೀನು
ಸ್ಪಂದಿಸದಿದ್ದರೆ ಸಮಾಜ ಘಾತುಕ ಹೆಣ ನೀನು ॥

ಓ ಸುನಾಮಿ ಮುಂದೆಂದೂ ಚಾಚದಿರು
ಈ ಪೈಶಾಚ್ಯ ನಾಲಗೆಯನು ನೀನು ।
ಸಾಗರದ ಮಧ್ಯದೆ ರುದ್ರ ನರ್ತನ ಮಾಡು
ತಟದಿ ನಿಂತು ಪ್ರಕೃತಿ ವೈಪರೀತ್ಯವನು
ಆನಂದಿಸುವೆ ನಾನು ॥

(ಗತಿಸಿದ ಸಹೋದ್ಯೋಗಿ ಬಸವರಾಜ ಬಿರಾದಾರನಿಗೆ ಅರ್ಪಣೆ)

ಬಳಿಕ ತೋರೋಣ ಬಾ

ಕೆ ಎ ಶಿವಪ್ಪ

ಧರೆ ಹೊತ್ತಿ ಉರಿದು
ಭಯದ ದಳ್ಳುರಿ ಎದ್ದು
ಮನೆ-ಮನೆಯೂ ಬೆಳಕನ್ನ
ಕಳೆದುಕೊಂಡಿದೆ
ಆತಂಕ ಧಾವಂತದಿಂದ
ತಡವರಿಸಿ ಬೀಳುವ ಮುನ್ನ
ಕುರುಡು ಕಳೆಯೋಣ ಬಾ

ದೇಹ ದೇಗುಲದಲ್ಲಿ
ದೀಪ ನಂದಿ ಹೋಗಿದೆ
ಹೃದಯ ಸಿಂಹಾಸನದಲ್ಲಿ
ಹೂವು ಬಾಡಿ ಹೋಗಿದೆ

ಪ್ರೀತಿ ಹೂವುಗಳ ಚೆಲ್ಲಿ
ಸ್ನೇಹ ಬಾಂಧವ್ಯದ ಎಣ್ಣೆಯ ಹಾಕಿ
ಕತ್ತಲು ಕಳೆಯೋಣ ಬಾ

ಕಾರ್ಮೋಡ ಕವಿದ
ಹೃದಯದ ಆಕಾಶದಲಿ
ಕಾರಿರುಳು ಕವಿದ
ಬಾಳ ಹಾದಿಯಲಿ
ಮಿನುಗು ನಕ್ಷತ್ರಗಳನಿಟ್ಟು
ಬೆಳಕು ತೋರೋಣ ಬಾ

ನಿರ್ಭಯತೆಯ ದೀಪ ಹಚ್ಚೋಣ ಬಾ
ಸಮರಸದ ಹಣತೆ ಉರಿಸೋಣ ಬಾ
ಶಾಂತಿ ಪ್ರೀತಿಯ ಬೆಳಕ ಉರಿಸೋಣ ಬಾ
ವೈಷಮ್ಯದ ವಿಷ ಮತ್ತೆ ಹರಡದಂತೆ
ಹೃದಯ ದೇಗುಲದಲ್ಲಿ ಮತ್ತೊಮ್ಮೆ
ನಿತ್ಯ ನೀಲಾಂಜಲಿ ಬೆಳಗೋಣ ಬಾ

ಬಿರುಗಾಳಿ ಬೀಸಿ!

ಪರ್ವತ್.ಎನ್.ಕೆ.

ಬಿರುಗಾಳಿ ಬಂದು ಬೀಸಿ ನನ್ನ ಮನೆಯ ಕೆಡವಿ ಹೋಯ್ತು
ಎಂತಹ ಮಾಯದ ಗಾಳಿ! ಸೂಚನೆ ಇಲ್ಲದೆಯೇ ಬಂದು ಹೋಯ್ತು
ಎತ್ತ ನೋಡಿದರೂ ಬರಡು, ಎನಗೆ ಆಸರೆ ಇಲ್ಲವಾಯ್ತು
ಚಿಕ್ಕ ಚೊಕ್ಕ ಮನೆಯ ಬೆಂಕಿಯಲಿ ಉರಿದಂತೆ, ಗಾಳಿಯಲಿ ತೂರಿ ಹೋಯ್ತು
ಮಡಿಲಲಿ ಮಲಗಿಸಿಕೊಂಡು ಸಾಕುತಿತ್ತು, ನನ್ನಿಂದ ಬಲು ದೂರವಾಯ್ತು
ಬದುಕು ನಡೆಸಲು ಗೂಡು ಇಲ್ಲವಾಯ್ತು, ಜೀವ ಬರೀ ಹುಸಿಯಾಯ್ತು
ಮಾಯದಂತ ಗಾಳಿ ಬಂದು ಎನ್ನ ಮನೆಯ ಮಗುಚಿ ಹೋಯ್ತು

ಕರುವು ಇಲ್ಲದೆಯೇ ಹಸುವು ಹಂಬಲಿಸುತಿರಲು
ಹೊಳೆಗಳು ಸೇರದೆಲೆ ತೀರಕೆ ಕಡಲು ಮೌನವಾಗಿರಲು
ರಸವನೀರಲು ಪುಷ್ಪ ದುಂಬಿಯ ಆಹ್ವಾನಿಸುತಿರಲು
ನಕ್ಷತ್ರಗಳು ಜೊತೆ ಇಲ್ಲದೆಲೇ ಚಂದ್ರನಲಿ ಮಂಕು ಕವಿದಿರಲು ನನ್ನ
ಬಿದ್ದ ಮನೆಯ ನೋಡಿ ಎನ್ನ ಮನವು ನೊಂದಿರಲು
ಮತ್ತೆ ಕಟ್ಟುವುದು ಯಾರೋ, ಮತ್ತೆ ಬಿರುಗಾಳಿಗೆ ಸಿಗದಿರಲು
ಬಾರದ ಗಾಳಿಯು ಬಂದು ಎನ್ನ ಮನೆಯು ಮಗುಚಿ ಹೋಯ್ತು

ಮನದಲ್ಲಿ ಬರೀ ನಗುವು ತುಂಬಿತ್ತು ಅಂದು ಅಲ್ಲಿ ....
ಇಂದು ಇಲ್ಲಿ ದುಃಖವು ಮನತುಂಬಿ ಬದುಕುವುದೇ ಹುಸಿಯಾಯ್ತು
ನೆನಪುಗಳು ಮನದಲ್ಲಿ ಮನೆಮಾಡಿ ಇಂದು ನೀ ದೂರ ಸರಿದಿರಲು
ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಭೂಮಿ ಬಿರಿದಂತೆ, ನನ್ನ ಮನವು ಸಿಡಿದಿರಲು
ಮುಂದೆ ಹೋಗುವ ದಾರಿಗೆ, ಅಡ್ಡಮುಳ್ಳು ಬೇಲಿಯಾಕಿರಲು
ದಾಟಿ ಹೋಗಲೋ? ಅದನ ಕಿತ್ತು ಬದಿಗೊತ್ತಿ ಹೋಗಲೊ?
ಬಿರುಗಾಳಿ ಬೀಸಿ, ನನ್ನ ಪ್ರೀತಿಯು ನಶಿಸಿ ಹೋಯ್ತು ....

ಹೊಸತನ

ಎಂ.ಎಸ್. ಕಮಲೇಶಯ್ಯ

ಅರಿದೆ ಅರಿವೆ,
ಬರಿದೆ ಸೆಳೆವೆ!
ಅದರ ಪರಿವೆ
ಆರಿಗಿರದೆ!

ಅರಿದು ಮೆರೆವೆ!
ನೆರೆತು ತೊರೆವೆ!
ಬಯಕೆ ಗುಡಿಯ,
ಕಟ್ಟಿ ಕರೆವೆ!

ಹರಿಯೆ ಜರಿವೆ,
ಹೊಸತನ ನೆನೆವೆ,
ಸಿಗದೆ ಬರಿದು,
ಆಗೆ – ದಣಿವೆ!

ದಣಿವ ತಣಿವ,
ಮೆಲುಕೊ ಮನವೆ!
ಅರಿವ – ಅರಿವೆ!
ಹೊಸತನವೆ!!

ಹೃದಯಾಲಯ

ಕೆ.ಎನ್.ಸಂಜೀವ ರಾವ್

ಈ ಜಗವೊಂದು ಗಹನವೆಂಬ ಹೃದಯಾಲಯ
ಅದರೊಳಗೆ ಇರಿಸಿದೆ ಜೀವ ಜೀವಗಳ ಒಲವಿನ ವಿನಿಮಯ
ಆವರಿಸಿದೆ ಪ್ರತಿ ಮನಮನಗಳಲಿ ತುಡಿತದ ಸೆಲೆಯ
ಪಸರಿಸಿದೆ ಮಧುರ ಭಾವನೆಗಳ ವಿವಿಧ ವಿಷಯ

ಹುಟ್ಟಿನಿಂದ ಸಾವಿನವರೆಗೆ ನೀಡುತಾ ನಾನಿರುತನೆಂಬ ಅಭಯ
ಕಟ್ಟಿಕೊಳ್ಳಿ ನೀವ್ ಬಂಧ, ಅನುಬಂಧಗಳೆಂಬ ಆಲಯ
ಸೃಷ್ಟಿಸಿ, ಮೆಟ್ಟಿ ನಿಲ್ಲ ಬಲ್ಲವೆಂಬ ಭ್ರಮೆಯವಲಯ
ನೂಕಿ, ಮುಷ್ಟಿ ಮಣ್ಣಿನ ಸಂಸ್ಕಾರಕೆ ಹೇಳುತಾ ವಿದಾಯ

ಬಲ್ಲಿರಾ ಹೃದಯ ಕಳಚಿ ಹೋದವರ ನಿಲಯ?
ಸವಾಲೆಸೆದಿದೆ ಪ್ರಕೃತಿ ತೋರುತಾ ಕುಹಕ ವಿನಯ
ಹೆಣೆದಿದೆ, ಹುಟ್ಟು ಸಾವುಗಳೆಂಬ ರಹಸ್ಯ ಬಲೆಯ
ಸಾಟಿಯಿಲ್ಲ, ವೀಕ್ಷಿಸಲು ಇದಕಿಂತ ಮಿಗಿಲಾದ ಕಲೆಯ

ಸುನಾಮಿ

ಕೆ.ಎನ್.ಸಂಜೀವ ರಾವ್

ಕೆಕ್ಕರಿಸಿದೆ ರಕ್ಕಸೀಯ ರಮಣೀ ಸುನಾಮಿ
ಇದರಡಿಯಲಿ ಎಲ್ಲ ಜೀವಗಳೂ ಬೇನಾಮಿ
ಮತ್ತೆ ಮರುಕಳಿಸದಂತೆ ಈ ಹರಾಮಿ
ಹುಟ್ಟಡಗಿಸಿ ಹೇಳಿಸಬೇಕು ನಾತಿ ಚರಾಮಿ

ಕಾಗದ ಬಂದಿದೆ ಕಾಗದ

ಮಧುಸೂಧನ್.ಜಿ.

ಕಾಗದ ಬಂದಿದೆ ಕಾಗದ
ಪ್ರಕೃತಿಯ ಮಡಿಲಿಂದ ವಿಷಾದದ

ಮರಗಿಡಗಳ ನೀ ಕಡಿದೆಯಂತೆ
ತಂಪು ನೆರಳನ್ನೇ ಸರಿಸಿದೆಯಂತೆ
ಹರ್ಷದಿ ವರ್ಷವ ನೀಡುವ ಮೋಡ
ಮುನಿದು ಬರಗಾಲವ ನೀಡುವುದೆಂಬ ॥ಕಾಗದ ಬಂದಿದೆ॥

ಹರಿಯುವ ನೀರನೆ ಕಟ್ಟಿದೆಯಂತೆ
ಬೆಳೆಯುವ ಭೂಮಿಯ ಮೆಟ್ಟಿದೆಯಂತೆ
ಹಚ್ಚ ಹಸುರಿನ ಸುಂದರ ನಾಡನು
ಮರುಭೂಮಿಯ ಬೀಡಾಗಿ ಮಾಡುವುದೆಂಬ ॥ಕಾಗದ ಬಂದಿದೆ॥

ಬೆಟ್ಟಗುಡ್ಡಗಳ ನೀ ಅಗೆದೆಯಂತೆ
ಕಲ್ಲು ಬಂಡೆಗಳ ಬಗೆದೆಯಂತೆ
ಭಾರವ ಹೊರುವ ಭೂಮಿಯು ಕೂಡ
ಗುಡುಗಿ ನಿನ್ನನು ನಡುಗಿಸುದೆಂಬ ॥ಕಾಗದ ಬಂದಿದೆ॥

ಬಾಳಲು ಸೂರ್ಯನು ಬೆಳಗಿದನಂತೆ
ಬೆಳಕಲೆ ಬಾಳನು ಅಳಿಸಿದೆಯಂತೆ
ಜ್ಯೋತಿಯ ನೀಡುವ ದೀಪವು ಕೂಡ
ಜ್ವಾಲೆಯಾಗಿ ನಿನ್ನ ಹೆದರಿಸುವದೆಂಬ ॥ಕಾಗದ ಬಂದಿದೆ॥

ಹಕ್ಕಿಯು ಚಿಲಿಪಿಲಿ ಉಸಿರಿಸದಂತೆ
ಪ್ರಾಣಿಯ ಸದ್ದೇ ಅಡಗಿಸುವಂತೆ
ಬೇಟೆಯ ನೆಪದಿ ಹೊಟ್ಟೆಯ ತುಂಬಿಸಿ
ಮೆರೆದಾಡುವ ನಿನಗೆಉಳಿಗಾಲವಿಲ್ಲವೆಂಬ

ಕಾಗದ ಬಂದಿದೆ ಕಾಗದ
ಪಕೃತಿಯ ಮಡಿಲಿಂದ ವಿಷಾದದ

ಕನ್ನಡವೇ ಸತ್ಯ ಕನ್ನಡವೇ ನಿತ್ಯ

ಪರ್ವತ್.ಎನ್.ಕೆ.

ಭಾರತಾಂಬೆಯ ಮಡಿಲ ಬೆಳಗುತಿಹುದು ಕನ್ನಡದ ಜ್ಯೋತಿ
ವೇದಾಂತಗಳ ತಿರುವಿ ನೋಡಿದರೂ ಕನ್ನಡದ್ದೇ ಕೀರ್ತಿ.
ಬಣ್ಣಿಸಲು ಅಸಾಧ್ಯವು, ವರ್ಣಿಸಲು ಅಪೂರ್ಣವು ಕನ್ನಡದ ದಾರಿ.
ನೂರಾರು ಭಾಷೆಗಳ ಜೊತೆಗೂಡಿ ಭವ್ಯ ಭಾರತದಿ ಮೆರೆದ ಕನ್ನಡ
ಕರುನಾಡ ಕನ್ನಡಿಗರ ಉಸಿರಾಗಿ ಬದುಕಲು ದಾರೀ ದೀಪವಾದ
"ಈ ದಿವ್ಯ ಕನ್ನಡ ಈ ಭವ್ಯ ಕನ್ನಡ"

ಕರುನಾಡ ನೋಡಾ, ಕಲೆಗೆ ಹೆಸರಾಗಿ ಸುಸಂಸ್ಕೃತಿಗೆ ಉಸಿರಾಗಿ.
ಕನ್ನಡದ ಕಲಿಗಳು ವೀರಾದಿ ವೀರರು ಜನ್ಮ ತಳೆದ ಭವ್ಯ ನಾಡಿದು
ಹಚ್ಚ ಹಸಿರು ನಾಡು ಇದುವೇ,ಇದಕೆ ಇಹುದು ರೈತರ ಬಲವೇ
ಮಣ್ಣಿನಲ್ಲಿ ಹೊನ್ನು ಬೆಳೆಯಲು ಹರಿಯುತಿಹ ಕಾವೇರಿಯ ತಾಣವು ಈ ನಾಡು
ಪ್ರಕೃತಿ ಸೌಂದರ್ಯಕೆ ಹೆಸರಾದ ನಾಡಿದು, ಶಿಲ್ಪ ಕಲೆಗೆ ಉಸಿರಾದ ಬೀಡಿದು
"ಅದುವೇ ಉಸಿರು ಕರುನಾಡು, ಹಸಿರು ಕರುನಾಡು"

ಬಡವ-ಬಲ್ಲಿದನೆಂಬ ಭೇದವ ಮರೆತು ಜೊತೆಗೂಡಿ ಬದುಕುತಿಹರು
ಸ್ತ್ರೀಯೇ ಮನೆಯ ಜ್ಯೋತಿಯಾಗಿ ಭಾರತೀಯ ಸಂಸ್ಕೃತಿಯ
ಉಳಿಸುತಿಹರು
ಧರ್ಮ-ಜಾತಿಗಳೊಡಗೂಡಿ ಐಕ್ಯತೆಯಲಿ ಏಕತೆಯ ಸಾರುತಿಹರು
ಧವಸ-ಧಾನ್ಯಗಳ ಕಣಜಕ್ಕೆ ಹೆಸರಾದ ಭವ್ಯ ಬೀಡು ಇದು "ನಮ್ಮೂರು"
ಹಿಂದಿನಿಂದಲೂ ಅಳಿಯದೇ ಬಂದ ನಾಡು ನುಡಿಯ ಉಳಿಸುತಿಹರು
"ನಮ್ಮವರು" " ಅವರೇ ಭಾರತೀಯರು, ಇವರೇ ಕನ್ನಡಿಗರು"

ನಾಡಿಗಾಗಿ ಪ್ರಾಣ ತೆತ್ತ ಹುಲಿಗಳ ಮರಿಗಳಿವರು ಕನ್ನಡಿಗರು
ಸಾವಿಗೂ ಅಂಜದೆ ದೇಶವನ್ನು ಕಾಯುವ ಸೈನಿಕರಿವರು,
ಬಂದವರ ಸ್ವಾಗತಿಸುತ್ತ ಜೊತೆಯಲ್ಲೆ ಹಂಚಿ ತಿನ್ನುವ
ಸಹೃದಯಿಗಳಿವರು
ಬದುಕುವದೇ ಇಲ್ಲೇ, ಸಾಯುವುದೇ ಇಲ್ಲೇ ಅದು ನಮ್ಮ ನೆಲದಲ್ಲೆ
ಹುಟ್ಟುವುದಾದರೂ, ಮುಂದೆ ಕರುನಾಡ ಭೂತಾಯಿ ಮಡಿಲಲ್ಲೆ
"ಸಾಕೆಮಗೆ ಈ ಜೀವನ ನಾವು ಹುಟ್ಟಿದ್ದೇ ಈ ನಾಡಿನಲ್ಲಿ ಪಾವನ"

ಮೃತಾ(ಗಾ)ಲಯ

ಚಂದ್ರಶೇಖರ ಭಟ್

ಒಳಗೆ ಬಾ ಪ್ರವಾಸಿಗನೆ
ಕೇಳು ನಮ್ಮ ಬೋನಿನೊಳಗಿನ ಭಾವನೆ

ನಾನೊಮ್ಮೆ ಬಯಸಿದ್ದೆ ಕಾಡಿನಲ್ಲೊಂದು ಸಂಸಾರ
ಆವಾಗಲೇ ನನ್ನ ಕತ್ತಿಗೆ ಬಿದ್ದಿತೊಂದು ದಾರ
ಹೆಂಡತಿ ಮಕ್ಕಳು ಸ್ನೇಹಿತರೆಲ್ಲರಾದರು ಬಲು ದೂರ
ಈ ವಿರಹ ವೇದನೆಯಿಂದಾಗುತಿದೆ ಬದುಕು ಕಷ್ಟಕರ
ಅನ್ಯಾಯವಾಗಿರುವ ನಮಗೆಲ್ಲಿದೆ ಪರಿಹಾರ.

ನಮ್ಮಯ ಬಂಧು ಭಾಂಧವರಿಂದಗಲಿಸಿ ಹಿಡಿದು ಹಿಂಸಿಸಿ ತಂದಿರಲ್ಲ
ನಮ್ಮನು ನಿಮ್ಮಯ ಮಕ್ಕಳಿಗೆಲ್ಲ ತೋರಿಸ ಬೇಕಂತಲ್ಲ
ಓ ಮಾನವಾ ನೀ ತೋರಿಸಬಲ್ಲೆ ಕೇವಲ ನಿನ್ನಯ ತಾತ
ಮುತ್ತಾತರಿಂದರ ಚಿತ್ರಗಳನ್ನಂತಲ್ಲ
ಅಂತೆಯೇ ನೀ ತೋರಿಸು ನಮ್ಮಯ ಚಿತ್ರಪಟಗಳನ್ನೆಲ್ಲ
ಹಿಡಿದು ಹಿಂಸಿಸಿ ಬಂಧಿಸದಿರು ನಮ್ಮನ್ನೆಲ್ಲ.

ದಯೆಯೇ ಧರ್ಮದ ಮೂಲವಯ್ಯ
ಬಸವಣ್ಣ ಬುದ್ಧರಾದಿಯರ ಮಾತದು ಏನಾಯಿತಯ್ಯ?
ನಿಮ್ಮಯ ಮಕ್ಕಳ ಪಠ್ಯಪುಸ್ತಕಗಳಿಗಷ್ಟೇ ಮೀಸಲೇನಯ್ಯ?
ಮೂಕ ಪ್ರಾಣಿಗಳ ಹಿಡಿದು ಬಂಧಿಸಿ ಖುಷಿಪಡುವ ಸಂಸ್ಕೃತಿ
ನಿನಗೇತಕಯ್ಯ?
ಬಂಧು ಬಾಂಧವರಿಲ್ಲದ ಸುಖಸಂತೋಷವ ತೊರೆದು ಬದುಕುವ
ನರಕಯಾತನೆಯ ನೆನೆಯಯ್ಯ.

ಏನೂ ಅರಿಯದ ಮೂಕ ಪ್ರಾಣಿಗಳು ನಾವಯ್ಯ
ನಮ್ಮೀ ನರಕಯಾತನೆಯ ನೀನರಿಯಯ್ಯ
ವಿಷ ಪ್ರಾಷನವ ಮಾಡಿಸಿ ನಮ್ಮಲ್ಲಿ ಹಲವರ ಕೊಂದಿರಂತಲ್ಲಯ್ಯ!
ಎಂದು ಬರುವುದೋ ನಮ್ಮಯ ಸರದಿಯೆಂದು ಕಾಯುತಿಹೆವಯ್ಯ!
ದಿನವೂ ಸಾಯುವ ಬದಲೊಮ್ಮೆಲೇ ಸಾಯುವಾಸೆಯು ಕರುಣೆಯ
ತೋರಯ್ಯ!

ಇಗೋ ನಿಮಗಿದು ನಲಿಯುವ ಮೃಗಾಲಯ
ಆದರಿದು ನಮಗಾಗಿಹುದು ನಿತ್ಯ ಮೃತಾಲಯ!

(ಮೈಸೂರಿನ ಮೃಗಾಲಯದಲ್ಲಿ ಪ್ರಾಣಿಗಳಿಗೆ ವಿಷ ಪ್ರಾಷನ ಮಾಡಿ ಕೊಲ್ಲಲಾಯಿತೆಂಬ ವರದಿಯನ್ನಾಧರಿಸಿ ಬರೆಯಲಾಗಿದೆ.)

ಪ್ರಳಯ

ಎಸ್.ಗೋಪಾಲ

ಪ್ರಳಯ!!!
ಈ ಶಬ್ಧವೇ ಮನುಕುಲದಲ್ಲಿ ಮಾಡುವುದು ಅಲ್ಲೋಲ ಕಲ್ಲೋಲ!
ಏನಾಗಬಹುದು ಎತ್ತಾಗಬಹುದು ಪ್ರಳಯ ಬಂದಾಗ!!
ಕಂಡವರಿಲ್ಲ ಮತ್ತೆ ಕೇಳಿದವರಿಲ್ಲ!
ಎಲ್ಲಾ ಬರೀ ಊಹಾ ಪೋಹಗಳು!!
ಭುವಿಯಲ್ಲಿ ಡೈನಸೋರುಗಳ ಅಂತ್ಯ ಇದಕೊಂದು ಕಾರಣ!
ಆಗಬಹುದೇ ಈ ಭೂಮಿ ಒಂದು ಅಗ್ನಿಕುಂಡ!!
ನೇಸರನ ತೀವ್ರ ಪರಿಣಾಮದಿಂದ!
ಇಲ್ಲ ಧರೆಯ ಸುತ್ತುವಿಕೆಯಲ್ಲಿ ಆಗಿ ಸ್ವಲ್ಪ ವ್ಯತ್ಯಾಸ!!
ಉತ್ತರ ಧ್ರುವದ ಕಲ್ಲು ಬಂಡೆಗಳು ಕರಗಿ ನೀರಾಗಿ!
ತರಬಹುದೆ ಜಲಪ್ರಳಯ!
ಇಳೆಯ ಜೀವರಾಶಿಗೆ ಹಾಡಬಹುದೆ ಮಂಗಳ!!
ಇಲ್ಲ ಮತ್ಯಾವುದೋ ಕ್ಷುದ್ರಗ್ರಹ ಮುತ್ತಿಕ್ಕಿ ಭೂಮಿಗೆ!
ಇಲ್ಲದಾಗಿಸುವುದೇ ಸಸ್ಯ, ಪ್ರಾಣಿ ಸಂಕುಲ!!
ಇದಾವುದೂ ಬಿಡಿಸಲಾಗದ ಕಗ್ಗಂಟು!
ಒಂದಂತು ನಿಜ ಆಗುವುದು ಪ್ರಳಯ!! ಆಗುತಿದೆ ಪ್ರಳಯ!!
ಪ್ರಳಯವೆಂದರೆ???
ಪ್ರಳಯವೆಂದರೆ ಬದಲಾವಣೆ!
ಇದೊಂದು ಕೇವಲ ಬದಲಾವಣೆ ಮಾತ್ರ!!
ನೋಡಿ ಮತ್ತೆ ಈ ಬದಲಾವಣೆ ಹೀಗಿದೆ!
ಕತ್ತಲಿನಿಂದ ಬೆಳಕಿನೆಡೆಗೆ!!
ಅಜ್ಞಾನದಿಂದ ವಿಜ್ಞಾನದೆಡೆಗೆ!
ಕ್ರೌರ್ಯದಿಂದ ಕರುಣೆಯೆಡೆಗೆ!!
ದ್ವೇಷದಿಂದ ಪ್ರೀತಿಯೆಡೆಗೆ!
ನಾಸ್ತಿಕತೆಯಿಂದ ಆಸ್ತಿಕದೆಡೆಗೆ!!
ನಿರ್ಲಿಪ್ತತೆಯಿಂದ ಅಧ್ಯಾತ್ಮಿಕದೆಡೆಗೆ!
ಬಂದರೆ ಬರಲಿ ಇಂತ ಹಾರೈಕೆಯ ಪ್ರಳಯಗಳು ನೂರಲ್ಲ!
ಸಾವಿರ! ಸಾವಿರ!!
ಸುಖ, ಸಂತೋಷ ಸಮೃದ್ಧಿಯೆಡೆಗೆ ಸಾಗಲಿ ವಿಶ್ವ ನಿರಂತರ

ಕನ್ನಡ ಸಾಂಸ್ಕೃತಿಕ ಸಂಘದ ವತಿಯಿಂದ
ಪ್ರಕಟಣೆಗೊಂಡ
ಕವನ ಸಂಕಲನಗಳು

ಬಾನಂಗಳದಲ್ಲಿ	: ೧೯೯೫
ಬಾನಬಯಲಿನಲಿ	: ೧೯೯೬
ಬಾನಪಥದಲ್ಲಿ	: ೧೯೯೭
ಬಾನ ಮುಂಜಾವಿನಲಿ	: ೧೯೯೮
ಬಾನ ಬೆಳಗಿನಲಿ	: ೨೦೦೦
ಬಾನ ಮಡಿಲಿನಲಿ	: ೨೦೦೨
ಬಾನ ಉಷೆಯಲ್ಲಿ	: ೨೦೦೨
ಬಾನ ಪಯಣದಲಿ	: ೨೦೦೩